
ಪ್ರಿಯ ಸಂಗಾತಿ



ನವೆಂಬರ್ 8, 1985 ಜಾಗೃತಿ ಮಹಿಳಾ ಅಧ್ಯಯನ ಕೇಂದ್ರ ಬೆಲೆ : ರೂ. 1-50

• ಕಳೆದ ಸಂಚಿಕೆಯು ಕೆಲವು ಚಂದಾದಾರರಿಗೆ ತಲುಪಿಲ್ಲವೆಂದು ದೂರು ಬಂದಿವೆ. ಆದ್ದರಿಂದ ಪತ್ರ ಬರೆದು ತಿಳಿಸಿ. 'ಪ್ರಿಯಸಂಗಾತಿ' ನಿಮಗೆ ಇಪ್ಪತ್ತನೆಯ ತಾರೀಖಿನೊಳಗೆ ತಲುಪದಿದ್ದರೆ, ನಿಮ್ಮ ಅಂಚೆ ಕಛೇರಿಯಲ್ಲಿ ವಿಚಾರಿಸಿ, ನಮಗೆ ಒಂದು ಪತ್ರವನ್ನು ಬರೆದು ಸಹಕರಿಸಿ. ಇದರಿಂದ ಮುಂದಿನ ಸಂಚಿಕೆಯ ಬಗ್ಗೆ ಎಚ್ಚರ ವಹಿಸಲು ಸಾಧ್ಯವಾಗುವುದು.

• ಕಳೆದ ಸಂಚಿಕೆಯ ಹಲವಾರು ಪ್ರತಿಗಳು ವಿಳಾಸ ಬದಲಾಗಿದೆಯೆಂದು ಹೇಳಿ ಹಿಂತಿರುಗಿಬಂದಿವೆ. ದಯವಿಟ್ಟು ನಿಮ್ಮ ವಿಳಾಸ ಬದಲಾದರೆ ಕೂಡಲೆ ನಮಗೆ ತಿಳಿಸಿ.

• 'ಪ್ರಿಯಸಂಗಾತಿ'ಯನ್ನು ಪಡೆಯಬಯಸುವವರು ದಯವಿಟ್ಟು ಕೆಳಗಿನ ವಿಳಾಸಕ್ಕೆ ಹತ್ತು ರೂಪಾಯಿಗಳನ್ನು ಎಂ.ಒ./ಡ್ರಾಫ್ಟ್ ಮೂಲಕ ಕಳುಹಿಸಿ.

ಜಾಗೃತಿ ಮಹಿಳಾ ಅಧ್ಯಯನ ಕೇಂದ್ರ
221, 4ನೇ ಮೇನ್, ವೈಯಾಳಿಕಾವಲ್,
ಬೆಂಗಳೂರು–560 003.

ಸಂಪಾದಕ ಮಂಡಳಿ

ಎನ್. ಗಾಯತ್ರಿ, ಡಾ|| ಮಾರ್ಗರೆಟ್ ಬಿಸ್ವಾಸ್,
ಲಕ್ಷ್ಮೀ ಚಂದ್ರಶೇಖರ್, ಭಾರತಿ,
ಎಲ್. ಎನ್. ಶ್ಯಾಮಲಾದೇವಿ, ಧನಲಕ್ಷ್ಮಿ

ಕಲೆ : **ಚಂದ್ರನಾಥ್**

ಪ್ರಸಾರ ವ್ಯವಸ್ಥೆ : **ಎನ್. ಶಾಂತಾ**

ಚಂದಾ ವಿವರ

ವಾರ್ಷಿಕ ಚಂದಾ : **10 ರೂ.**

ಬಿಡಿ ಪ್ರತಿ : **1–50 ರೂ.**

Printed at ILA Printers, 153 8th cross, Chamarajapet, Bangalore-18 and published by Dr. G. Ramakrishna on behalf of Jagruthi Mahila Adhyayana Kendra, 221, IV Main, Vyalikaval, BANGALORE-3

Editor: **N. Gayathri**

ಖಾಸಗಿ ಪ್ರಸಾರಕ್ಕಾಗಿ....

ಸಂಪುಟ 1 ಸಂಚಿಕೆ 5

ಇದು ಎಂತಹ ಸಂಸ್ಕೃತಿ ?

ನಮ್ಮ ಸಮಾಜದಲ್ಲಿ ಸಂಸ್ಕೃತಿಯ ಬಗೆಗೆ ಇರುವ ತಪ್ಪು ಕಲ್ಪನೆಗಳಂತೆಯೇ ಸಂಸ್ಕೃತಿಯ ವಾರಸುದಾರರು ತಾವೇ ಎಂಬಂತೆ ವರ್ತಿಸುವ ಜನಕ್ಕೂ ಕಡಿಮೆಯಿಲ್ಲ. ಹೆಣ್ಣನ್ನು ಅಪಮಾನಗೊಳಿಸುವಲ್ಲಿ ಇಂತಹ ವಾರಸುದಾರರು ಒಂದು ಹೆಜ್ಜೆ ಮುಂದೆ ಹೋಗುತ್ತಾರೆ. ಕೆಲವು ದಿನಗಳ ಹಿಂದೆ ಇಂತಹದೊಂದು ಘಟನೆ ಬೆಂಗಳೂರಿನಲ್ಲಿ ನಡೆಯಿತು.

ನಗರದ ಪ್ರಖ್ಯಾತ ಕಾಲೇಜೊಂದರ ಅಧ್ಯಾಪಕರು ಕೆಲವು ತಿಂಗಳ ಹಿಂದೆ ಅನಾರೋಗ್ಯದಿಂದ ತೀರಿ ಹೋದರು. ಆ ಅಧ್ಯಾಪಕರ ಮಡದಿ ಗಂಡನ 'ಫ್ಯಾಮಿಲಿ ಪೆನ್ಷನ್'ನ್ನು ಪಡೆಯಬೇಕಾದಾಗ ಎದುರಿಸಿದ ಮುಜುಗರದ ಸ್ಥಿತಿ ಎಂತಹವರಿಗೂ ಸಿಟ್ಟು ಬರಿಸುತ್ತದೆ. ಫ್ಯಾಮಿಲಿ ಪೆನ್ಷನ್ ಪಡೆಯಲು ಹಾಕಿದ ಅರ್ಜಿಯೊಂದಿಗೆ ಲಗತ್ತಿಸಿದ ಆ ಹೆಣ್ಣಿನ ಭಾವಚಿತ್ರಗಳಲ್ಲಿ ಹಣೆಯಲ್ಲಿ ಕುಂಕುಮವಿತ್ತಂತೆ! ಆದ್ದರಿಂದ ಫ್ಯಾಮಿಲಿ ಪೆನ್ಷನ್ ಬೇಕಾದರೆ ಹಣೆಯಲ್ಲಿ ಕುಂಕುಮವಿಲ್ಲದ ಭಾವಚಿತ್ರಗಳನ್ನು ಕೊಡಬೇಕೆಂದು ಸಂಬಂಧಪಟ್ಟವರು ಹೇಳಿ ಲಾಗಿ ಅನಿವಾರ್ಯವಾಗಿ ಅಂತಹ ಭಾವಚಿತ್ರಗಳನ್ನು ಅವರು ಕೊಟ್ಟಿದ್ದಾರೆ.

ವಿಧವೆಯ ಹಣೆಯಲ್ಲಿ ಕುಂಕುಮವಿದ್ದರೆ ಎಂತಹ ಅನರ್ಥ! ಸಮಾಜವನ್ನು ರೂಪಿಸಬೇಕಾದ ಜವಾಬ್ದಾರಿಯಿರುವ ಶಿಕ್ಷಣ ಇಲಾಖೆಯಲ್ಲಿ ಎಂತಹ ಆಭಾಸ! ಜಾತ್ಯಾತೀತ ಸರ್ಕಾರದ (ಕಾಲೇಜು ಶಿಕ್ಷಣ ಇಲಾಖೆ) ನೌಕರರೊಬ್ಬರು ಕಚೇರಿಯಲ್ಲಿ ಕುಳಿತು ವಿಧವೆಯ ಹಣೆಯಲ್ಲಿ ಕುಂಕುಮವಿರಬೇಕೇ ಬೇಡವೇ ಎಂದು ಜಿಜ್ಞಾಸೆ ನಡೆಸುವುದು ಎಷ್ಟು ಸರಿ? ಇದಕ್ಕೆ ಕಾಲೇಜು ಶಿಕ್ಷಣ ಇಲಾಖೆಯ ನಿರ್ದೇಶಕಿಯಾಗಿರುವ ಶ್ರೀಮತಿ ಸೆಲ್ವಿದಾಸ್ ಏನು ಹೇಳುತ್ತಾರೆ ? ●

ಪ್ರಿಯಸಂಗಾತಿ,

ಇತ್ತೀಚಿಗೆ ಪಾರ್ಲಿಮೆಂಟನಲ್ಲಿ ಶ್ರೀ ಬನತ್‌ವಾಲಾ ಮಂಡಿಸಿದ ಮಸೂದೆಯಲ್ಲಿ ನಮ್ಮ ಮುಸ್ಲಿಂ ಸೋದರಿಯರಿಗೆ ಘೋರವಾದ ಅನ್ಯಾಯವುಂಟಾಗಿದೆ. ಆದರಂತೆ ಭಾರತ ಸಂವಿಧಾನದ 44 ನೇ ಕಲಮ್‌ಅನ್ನು ಬದಲಿಸಬೇಕೆಂಬ ಅದರ ಬೇಡಿಕೆಯು ತೋರಿಕೆಗೆ ಧಾರ್ಮಿಕವಾಗಿ ಕಾಣುವುದಾದರೂ ಅದು ಪ್ರಜಾಪ್ರಭುತ್ವ ವಿರೋಧಿ ಕೂಡ. ಒಟ್ಟಿನಲ್ಲಿ ಈ ದೃಷ್ಟಿ ಸಂಕುಚಿತ ಮನೋಭಾವದ ಪ್ರತೀಕವಾಗಿದೆ, ದಕ್ಷಿಣ ಆಫ್ರಿಕಾದ ವರ್ಣದ್ವೇಷಿ ಸರ್ಕಾರವನ್ನು ನೆನಪಿಗೆ ತರುತ್ತದೆ. ಒಂದು ಧಾರ್ಮಿಕ ಮತಾಂಧತೆಯಾದರೆ, ಮತ್ತೊಂದು ವರ್ಣದ್ವೇಷೀಯ ರಾಕ್ಷಸೀ ದೌರ್ಜನ್ಯ.

ಇಂದು ದಕ್ಷಿಣ ಆಫ್ರಿಕಾ ವರ್ಣದ್ವೇಷದ ದಳ್ಳುರಿಗೆ ಸಿಕ್ಕಿ ಹೊತ್ತಿ ಉರಿಯುತ್ತಿದೆ. ಅಲ್ಲಿನ ಸರ್ಕಾರದ ವಿರುದ್ಧ ಪ್ರಚಂಡವಾದ ಶಕ್ತಿಯ ಉತ್ಕರ್ಷವಾಗಿದೆ. "ಬಹು ಸಂಖ್ಯಾತ ಕರಿಯ ಜನತೆಗೆ ಇಂದು ಚರ್ಚಿಸಲು ಇರುವ ಒಂದೇ ವಿಷಯ – ಅಧಿಕಾರದ ಹಸ್ತಾಂತರ," ಎಂದು ಪತ್ರಿಕಾಸಂದರ್ಶನದಲ್ಲಿ ನುಡಿದು ಸರ್ಕಾರದ ಆಜ್ಞೆಯನ್ನು ಉಲ್ಲಂಘಿಸಿದ ವಿನ್ನಿ ಮ್ಯಾಂಡೆಲಾನ ಮನೆಯನ್ನು ಸಂಪೂರ್ಣವಾಗಿ ಸುಟ್ಟುಹಾಕಲಾಗಿದೆ. ಎರಡೂವರೆ ಕೋಟಿ ಕಪ್ಪು ಜನರು ತಮ್ಮ ಹಕ್ಕು ಮತ್ತು ಸ್ವಾತಂತ್ರ್ಯಕ್ಕಾಗಿ ನಡೆಸಿರುವ ಈ ಹೋರಾಟವನ್ನು ನಂದಿಸಲು ಅಧ್ಯಕ್ಷ ಬೋಥಾ ತುರ್ತುಪರಿಸ್ಥಿತಿಯನ್ನು ಹೇರಿದ್ದಾನೆ.

ಮಕ್ಕಳು, ಹೆಂಗಸರು, ವಿದ್ಯಾರ್ಥಿಗಳು, ಕಾರ್ಮಿಕರು, ಕಲಾವಿದರು–ಸಮಾಜದ ಎಲ್ಲ ಜನತೆಯು ಈ ಮಾರ್ಷಲ್‌ಲಾ ವಿರುದ್ಧ ಪ್ರತಿಭಟಿಸುತ್ತಿದ್ದಾರೆ. ರಾಷ್ಟ್ರನಾಯಕ ನೆಲ್ಸನ್ ಮ್ಯಾಂಡೆಲಾನನ್ನು ಬಂಧಿಸಿರುವ ಪೋಲ್ಸ್‌ಮೂರ್ ಬಂದಿಖಾನೆಗೆ ಮೆರವಣಿಗೆ ಹೊರಟ ಸಹಸ್ರಾರು ಮಂದಿ ಕರಿಯರು ಸರ್ಕಾರದ ಗುಂಡಿಗೆ ತುತ್ತಾದರು. ಇಪತ್ತುನಾಲ್ಕು ವರ್ಷಗಳಿಂದ ಸೆರೆಮನೆಯಲ್ಲಿ ಕೊಳೆಯುತ್ತಿರುವ ನಾಯಕ ನೆಲ್ಸನ್ ಮ್ಯಾಂಡೆಲಾನ ಬಿಡುಗಡೆಗೆ ಒತ್ತಾಯಿಸಿ ಬೋಥಾನ ನಿವಾಸಕ್ಕೆ ಮೆರವಣಿಗೆ ಹೊರಟ ಸಹಸ್ರಾರು ಜನರ ಮೇಲೂ ಗುಂಡಿನ ಮಳೆಗರೆಯಲಾಯಿತು. ಈ ಎಲ್ಲಾ ಹೋರಾಟಗಳಲ್ಲೂ ಆಫ್ರಿಕಾದ ಮಹಿಳೆ ಪುರುಷನೊಂದಿಗೆ ಸಮಸಮವಾದ ಹೆಜ್ಜೆ ಹಾಕಿದ್ದಾಳೆ. ವರ್ಷಾನುಗಟ್ಟಲೆ ಸೆರೆಮನೆಯಲ್ಲಿ ಗಂಡಂದಿರಿರುವಾಗ ಎಷ್ಟೋ ಮಹಿಳೆಯರು ಸಂಸಾರದ ಜವಾಬ್ದಾರಿಯನ್ನು ಸಮರ್ಥವಾಗಿ ನೆರವೇರಿಸಿ ತಮ್ಮ ಸ್ವಾತಂತ್ರ್ಯದ ಹೋರಾಟದಲ್ಲಿ ಸಕ್ರಿಯವಾಗಿ ಭಾಗಿಯಾಗಿದ್ದಾರೆ; ಸೆರೆಮನೆಯ ವಾಸವನ್ನು ಅನುಭವಿಸುತ್ತಿರುವ ಮಹಿಳೆಯರೂ ಬಹಳ ಇದ್ದಾರೆ.

ದಕ್ಷಿಣ ಆಫ್ರಿಕಾ ಸರ್ಕಾರದ ಈ ಅಮಾನುಷ ಕೃತ್ಯವನ್ನು ವಿಶ್ವದ ಎಲ್ಲ ಜನತೆ ಒಕ್ಕೊರಲಿನಿಂದ ಖಂಡಿಸುತ್ತಿದ್ದಾಗ್ಯೂ ಅಮೆರಿಕಾ ಮತ್ತು ಬ್ರಿಟನ್ ಮೌನವಾಗಿರುವುದು ಅವರ ಅಮಾನವೀಯ ನೀತಿಗೆ ದ್ಯೋತಕವಾಗಿದೆ. ಅತ್ಯಂತ ಕಡಿಮೆ ಬಂಡವಾಳದ ಹೂಡಿಕೆಯಿಂದ ಹೆಚ್ಚು ಆರ್ಥಿಕಲಾಭ ಪಡೆಯಲು ಸಾಧ್ಯವಿರುವಂತಹ ದಕ್ಷಿಣ ಆಫ್ರಿಕೆಯು ಬ್ರಿಟನ್ನಿನ ಸಂಪತ್ತಿನ ಗಣಿಯಾಗಿರುವಾಗ ಅದನ್ನು ಕಳೆದುಕೊಳ್ಳುವ ಮನಸ್ಸು ಅದಕ್ಕೆಲ್ಲಿದೆ ? ದಕ್ಷಿಣ ಆಫ್ರಿಕೆಯಲ್ಲಿ ನಡೆಯುತ್ತಿರುವ ಕ್ರಾಂತಿ ರೇಗನ್ ಮತ್ತು ಥ್ಯಾಚರ್‌ಗೆ ಸವಾಲಾಗಿರುವುದಷ್ಟೇ ಅಲ್ಲ, ಜಯವನ್ನು ಸಾಧಿಸಿ ಚರಿತ್ರೆಯ ಮಹತ್ತರ ಪಾಠವೊಂದನ್ನು ಎಲ್ಲರಿಗೂ ಕಲಿಸಲಿದೆ. ಆದಷ್ಟು ಬೇಗ ಈ ಘಟನೆ ಸಂಭವಿಸಲೆಂಬುದು ನಮ್ಮ ಆಶಯ.

ಎನ್. ಗಾಯತ್ರಿ



ಮಾನವನ್ನು ಕಳೆದುಕೊಂಡು ಮಾನಕ್ಕಾಗಿ, ನ್ಯಾಯಕ್ಕಾಗಿ ಹೋರಾಡುವ ತಮ್ಮ ಸಹೋದರಿ ಪಾರ್ವತೆವ್ವನು ಮಾಡುವ ವಂದನೆಗಳು.

ನಮ್ಮ ರಾಯಚೂರು ಜಿಲ್ಲೆಯ ಕುದುರೆಮೋತಿ ಪ್ರಕರಣ ಹೋರಾಟ ಸಮನ್ವಯ ಸಮಿತಿಯವರು ಹಾಗೂ ಕರ್ನಾಟಕದ ಎಲ್ಲಾ ಭಾಗಗಳಿಂದಲೂ ಮಹಿಳಾ ಸಂಘಟನೆಗಳ ನನ್ನ ಸಹೋದರ, ಸಹೋದರಿಯರೆಲ್ಲರೂ ಕೂಡಿ ಈ ನಿಮ್ಮ ಇಬ್ಬರು ಸಹೋದರಿಯರಿಗಾದ ಅನ್ಯಾಯಕ್ಕಾಗಿ ರಾಜ್ಯಮಟ್ಟದ ಹೋರಾಟ ನಡೆಸಿದ್ದನ್ನು ನೋಡಿ, ನನ್ನ ಕುಟುಂಬದ ನಾವೆಲ್ಲರೂ ನಿಮಗೆ ಋಣಿಯಾಗಿದ್ದೇವೆ. ಇಷ್ಟೆಲ್ಲ ಹೋರಾಟ ನಡೆಸಿದ್ದರೂ ಈ ನಮ್ಮ ಘನ ಸರ್ಕಾರ ಎಚ್ಚತ್ತಿಲ್ಲ. ಹತ್ತು ದಿನದೊಳಗಾಗಿ ವರದಿ ಒಪ್ಪಿಸುತ್ತೇವೆಂದು ಹೇಳಿ ಇಲ್ಲಿಯವರೆಗೂ ವರದಿ ಒಪ್ಪಿಸದೇ ಇದ್ದುದಕ್ಕೆ, ಇದರ ಮೇಲೆ ನಾವು ಎಷ್ಟರ ಮಟ್ಟಿಗೆ ವಿಶ್ವಾಸವಿಡಬಹುದು? ಈ ಸದನ ಸಮಿತಿಯನ್ನು ಈ ಸ್ವಾಮಿಯು ಕೊಂಡುಕೊಂಡಿದ್ದಾನೆನ್ನುವುದರಲ್ಲಿ ಸಂಶಯವಿಲ್ಲ. ಕುದುರೆಮೋತಿಗೆ ಸದನಸಮಿತಿ ಬಂದಾಗ ಪ್ರತ್ಯಕ್ಷವಾಗಿ ಈ ಸ್ವಾಮಿಯು ಹಿರೇಮ್ಯಾಗೇರಿ ಹಾಗೂ ಸುತ್ತಮುತ್ತಲಿನ ಜನರನ್ನು ಕೊಂಡುಕೊಂಡು ಕಳಿಸಿದ್ದನೆಂಬುದನ್ನು ಸದನಸಮಿತಿಯೇ ಖುದ್ದಾಗಿ ಪರಿಶೀಲಿಸಿದೆ. ಲಾರಿಗಳಲ್ಲಿ ಬಡಿಗೆ, ಕೊಡ್ಲಿ, ಕುಡುಗೋಲು ಮಚ್ಚುಗಳೊಂದಿಗೆ ಬಂದಿದ್ದನ್ನು ಕಣ್ಣಾರೆ ಕಂಡಿದ್ದೇನೆ. ಇವೆಲ್ಲವುಗಳೊಂದಿಗೆ ಸುಸಜ್ಜಿತವಾಗಿ ಏಕೆ ಈ ಜನ ಬಂದಿತ್ತು? ಈ ಸದನ ಸಮಿತಿಯಾದರೋ ಇಷ್ಟೆಲ್ಲವನ್ನು ಕಣ್ಣಾರೆ ಕಂಡೂ ಏಕೆ ನಿಷ್ಕ್ರಿಯವಾಗಿ ಕುಳಿತಿತ್ತು? ಪೋಲೀಸ್ ಅಧಿಕಾರಿಗಳೂ ಕೂಡ ನಿಷ್ಕ್ರಿಯರಾಗಿದ್ದರು. ಪರ ಊರಿನಿಂದ ಬಂದ ಜನರಿಂದ (ಸಾಕ್ಷಿ) ಹೇಳಿಕೆ ಪಡೆಯುತ್ತಿರುವಾಗ, ಈ ಕುದುರೆಮೋತಿ ಪ್ರಕರಣದ ಹೋರಾಟ ಸಮಿತಿಯವರಾದ ಸಂಚಾಲಕ ರಾಘವೇಂದ್ರ ಕುಷ್ಟಗಿ ಹಾಗೂ ಅಲ್ಲಮಪ್ರಭು ಬೆಟದೂರುರವರು ಈ ವಿಷಯವನ್ನು ಬಹಿರಂಗಪಡಿಸಿದಾಗ ಈ ಜನಜಂಗುಳಿ ಉಭಯತರ ಮೇಲೆ ಕೈಮಾಡಲು ಹೋದಾಗ ಈ ಜನರನ್ನು ಹತೋಟಿಗೆ ತರದೇ ಬಿಟ್ಟರು. ಅಲ್ಲಿ ವೇದಿಕೆಗೆ ಬಂದು ಸಮಿತಿಯ ಮುಂದೆ ಈ ಘಟನೆಯ ಬಗ್ಗೆ ನಿಜಾಂಶ ಹೇಳಬೇಕೆನ್ನುವ ಗ್ರಾಮದ ಬಡಜನತೆಯ ಮನದಲ್ಲಿ ಭಯದ ವಾತಾವಾರಣವನ್ನುಂಟು ಮಾಡಿ ಅಲ್ಲಿಯ ಶಾಂತತೆಗೆ ಭಂಗ ಮಾಡಿದ ಸ್ವಾಮಿಯ ಪುಂಡಭಕ್ತರನ್ನು ಕಂಡು ಈ ಸಮಿತಿಯ ಶಾಸಕರೇ ಭಯಗೊಂಡರೇನೋ ಅನ್ನುವಂತಿದೆ. ಮೇಲಾಗಿ ಈ ಸದನಸಮಿತಿ, ಸಿ.ಓ.ಡಿ. ತನಿಖೆ–ಇದರ ಮೇಲಿಂದ ನ್ಯಾಯಾಲಯಕ್ಕೆ ಹೋದರೂ ಸರಿಯಾದ ನ್ಯಾಯ ಸಿಗುತ್ತದೆಂಬ ಭರವಸೆ ಇಲ್ಲ. ಏಕೆಂದರೆ ಅಲ್ಲಿಯ ಸರಕಾರಿ ವಕೀಲರೇ ಸ್ವಾಮಿಗೆ ಶಾಮೀಲಾಗಿ ಬಿಟ್ಟಿದ್ದಾರೆ. ಇದಲ್ಲದೆ ಆರೋಪಿಗಳು ರಾಜರಾಗಿ ಮೆರೆಯುತ್ತಿದ್ದಾರೆ. ಸ್ವಾಮಿಯು ಅದರಲ್ಲಿ ತನ್ನದೇನೂ ತಪ್ಪಿಲ್ಲವೆಂದು ಮುಗ್ಧ ಜನತೆಯನ್ನು ತನ್ನ ಪಾಶವೀ ಶಕ್ತಿಯ ಹಿಡಿತದಲ್ಲಿಟ್ಟುಕೊಂಡು ಮೆರವಣಿಗೆ ಮಾಡಿಸಿಕೊಳ್ಳುತ್ತ ನಡೆದಿದ್ದಾನೆ. ತಾನು ಮಾಡಿದ ಈ ಕೃತ್ಯಕ್ಕೆ ಅನೇಕ ನಿರಪರಾಧಿಗಳನ್ನು ಬಲಿ ತೆಗೆದುಕೊಳ್ಳುತ್ತಿದ್ದಾನೆ. ಈಗ ನೀವೂ ನಾವೂ ಹೋರಾಡಿ ಈ ದಮನ ಶಕ್ತಿಯನ್ನು ನಿಲ್ಲಿಸಬೇಕಾಗಿದೆ.

ಮಹಿಳೆಯರ ಮೇಲಾಗುವ ಅತ್ಯಾಚಾರಗಳ ವಿರುದ್ಧ ಹೋರಾಡಲು ಘನವಾದ ಶಕ್ತಿಯನ್ನು ಕೊಟ್ಟು ಇಂಥ ಅಮಾನುಷ ಹೇಯ ಘಟನೆ ಜರುಗಿಸಿದ ಸ್ವಾಮಿ ಮತ್ತು ಅವನ ಹಿಂಬಾಲಕರಿಗೆ ಸರಿಯಾದ ಶಿಕ್ಷೆ ಆಗುವಂತೆ ಮತ್ತು ಈ ನೊಂದ ಜೀವಿಗಳಿಗೆ ಸರಿಯಾದ ನ್ಯಾಯ ದೊರಕುವಂತೆ ಬೆಂಬಲಿಸಬೇಕೆಂದು ಮಹಾಜನಗಳಲ್ಲಿ ಬೇಡಿಕೊಳ್ಳುವೆ.

ಹೋರಾಟಕ್ಕೆ ಜಯ ಸಿಗಲಿ

ಎಲಬುರ್ಗಾ
12-9-85

ಪಾರ್ವತೆವ್ವ

ಕವನ

ಹುಡುಕಾಟ ! - ಹೋರಾಟ ? !

ಬರಗಾಲದ ಹಳ್ಳಿ ;
ಹಸಿರಿಲ್ಲದ ನೆಲ ;
ನೀರಿಲ್ಲದ ಕೆರೆ ;
ಬಟ್ಟೆಗಳಾಚೆ ಬಿಟ್ಟುಕೊಂಡಿರುವ ಮೈಯಿ ;
ಹೊಟ್ಟೆ ಬೆನ್ನು ಒಂದಾದ ಜೀವ ;
ಸೋತ ಮುಖದ ಪ್ರೇತ ಕಣ್ಣು
ಹೇಳುತ್ತಿವೆ ಬದುಕೊಂದು ಹೋರಾಟ !
ಸುಪ್ತಗೊಂಡ ಬಯಕೆಗಳ
ಗರಿಗರಿ ಪದರಗಳು
ಒಂದಕ್ಕೊಂದು ಅಂಟಿಕೊಂಡು
ಮನದಾಳದಲ್ಲೆಲ್ಲೋ ಅಡಗಿ ಕೂತ
ಹೆಣ್ಣಿನ ಅಂತರಂಕ ತುಮುಲ
ಗಳನ್ನೆಲ್ಲ ಹಾರಿಸಿಕೊಂಡು
ಹೋದ ಆ ಬಿರುಗಾಳಿಯ ಶಬ್ದ
ಅಬ್ಬರಿಸಿದಾಗ,
ಅನಿಸುತ್ತದೆ, ಹುಡುಕಾಟವಾಗಬೇಕಿದ್ದ
ಬದುಕು ಹೋರಾಟವಾಗಿದೆಯೆಂದು.
ಸಮೃದ್ಧಿ ನೆಲದ
ಹಸಿರು ಹೆಮ್ಮರವೊಂದು
ನೀಡುವ ಸುಂದರ ಹೂವು
ಅರಳಿ, ಕಾಯಿ ಹಣ್ಣಾಗಿ,
ತನ್ನತನಕ್ಕೆ ಅರ್ಥ ಹಚ್ಚುವ ಮುನ್ನ
ಯಾವುದೋ ಕೆಟ್ಟ ಶಕ್ತಿಗೊಳಗಾಗಿ
ತಿರುಚಿ ಹೋದಾಗ, ಅದರ
ಬದುಕಿನ ಹೋರಾಟ ಅಲ್ಲಿಗೇ ಮುರುಟುತ್ತದೆ.
ನೆಟ್ಟ ಬೀಜವು ಬಲಿತು
ಚಿಗುರು ಸಸಿ ಮೇಲೆ ಬಂದು
ಒಳಗೆ ಬೇರು ಬಿಡುವ ಮುನ್ನ
ಕಳಚಿಕೊಂಡು ಹೋದಾಗ
ಅಸಹಾಯಕತೆಯ ಸ್ವರೂಪ
ಎದ್ದು ಬಂದು ಗುದ್ದು ಕೊಟ್ಟು
ಗಹಗಹಿಸಿ ನಗುತ್ತದೆ.
ಆದರೆ, ಎಂದಾದರೂ
ಬಿರುಕು ನೆಲ ಒಂದಾಗಲೇ ಬೇಕು ;
ಬಯಕೆಯ ಹಾರಿಸಿಕೊಂಡು ಹೋದ
ಬಿರುಗಾಳಿ ವಾಪಸ್ಸಾಗಲೇ ಬೇಕು ;
ತಿರುಚಿಹೋದ ಹೂವು ಅರಳಲೇಬೇಕು ;
ಚಿಗುರು ಸಸಿ ಬೇರು ಬಿಡಲೇ ಬೇಕು ;
ಬದುಕು ಕೇವಲ ಹೋರಾಟವಾಗದೆ
ಜೊತೆಗೆ ಹುಡುಕಾಟ ಕೂಡ ಆಗಲೇಬೇಕು.

–ಮಂಗಳ, ನಾ

ಓಲಗದ ಮರೆಯಲ್ಲಿ.......

ಅವಳು ಮದುವಣಗಿತ್ತಿ
ಹಣೆಗೆ ಚಾಮರ ಚಿಕ್ಕಿ
ಹಸಿರುಬಳೆ ಶಬ್ದದಲಿ ಅಭ್ಯಂಜನ.
ಬಿಳಲು ಬಲಿಯದ ವೇಳೆ
ಬೆಳೆದ ಎದೆಗಳ ಬಾಲೆ
ಅವಳ ಮೈ ನರನರದಲ್ಲೂ ರೋಮಾಂಚನ.
ಕನಸ ತೂಗಿವೆ ಕಣ್ಣು
ಮಳೆ ಬಿದ್ದ ಹಸಿಮಣ್ಣು
ಅವಳೆದೆಯ ಪೊಟರೆಯಲಿ ಹನಿಸಿಂಚನ.
ಮಧ್ಯರಾತ್ರಿಯ ವೇಳೆ
ಹೂ ದವನ ಹೊಂಬಾಳೆ
ಎಷ್ಟೊಂದು ಕನಸುಗಳ ಸಿಂಹಾಸನ.
ಬಣ್ಣಬಣ್ಣದ ಪಕಳೆ
ಸ್ವಾತಿ ಮುತ್ತಿನ ಹಾಳೆ
ಮರಳ ರಾಶಿಯ ಮೇಲೆ ಮಧು ಚುಂಬನ.
ಓಲಗದ ಕ್ಷಣಕ್ಷಣವು
ಬಿಕ್ಕಳಿಸಿ ನೆನಪುಗಳು
ಪ್ರತಿಯೊಂದು ನೋವುಗಳು ಹಸಿತೋರಣ.
ಮುಖದ ನಗುವಿನ ಹಿಂದೆ
ನೋವುಗಳ ಗೆರೆ ಹೊತ್ತು
ಪ್ರತಿನಿಮಿಷ ಭಾವಗಳ ಭೂಕಂಪನ.
ಹಸಿರು ಎಲೆಗಳು ಬಾಡಿ
ಬರಿ ಪದರ ಉಸಿರಾಡಿ
ಮೂಕವಾಗಿದೆ ಮಾತು ಬರಿರೋದನ.

–ಜಿ. ಎನ್. ಮೋಹನ್

ಪ್ರಾಚೀನ ಕಾಲದಲ್ಲಿ ಸ್ತ್ರೀಮಾಂತ್ರಿಕರು.......

ಬೇಸಾಯಕ್ಕಿಂತ ಮೊದಲು ಪಶುಪಾಲನೆಯ ಹಂತವನ್ನು ತಲುಪಿದ ಸಮಾಜಗಳು ಆರ್ಯರಂತೆ ಬೇಗ ಶೀಘ್ರವಾಗಿ ಪುರುಷ ಪ್ರಧಾನ ಸಮಾಜಗಳಾಗಿ ಪರಿವರ್ತನೆ ಹೊಂದಿದವು. ಈ ಸಮಾಜಗಳು ಅನಂತರ ಬೇಸಾಯವನ್ನು ಆರಂಭಿಸಿದರೂ ಅದರಿಂದ ಪುರುಷರ ಸ್ಥಾನಕ್ಕೆ ಧಕ್ಕೆ ಉಂಟಾಗಲಿಲ್ಲ. ಆದರೆ ಪಶುಪಾಲನೆಗಿಂತ ಮೊದಲು ಬೇಸಾಯವನ್ನು ಆರಂಭಿಸಿದ ಸಮಾಜಗಳು ಬಹುಕಾಲದವರೆಗೆ ಸ್ತ್ರೀ ಪ್ರಧಾನ ಸಮಾಜಗಳಾಗಿಯೇ ಉಳಿದವು. ಈ ಎರಡು ರೀತಿಯ ಸಮಾಜಗಳನ್ನು ಸಹ ಭಾರತದ ಆದಿವಾಸಿಗಳಲ್ಲಿ ಇಂದಿಗೂ ನಾವು ಕಾಣಬಹುದು. ಒಂದು ನೀಲಗಿರಿಯ ತೋಡರು. ಪಶುಪಾಲನೆಯೇ ಮುಖ್ಯ ಕಾಯಕವಾಗಿರುವ ಇವರದ್ದು ಪಿತೃಪ್ರಧಾನ ಸಮಾಜ. ಇನ್ನೊಂದು ಅಸ್ಸಾಮಿನ ಖಾಸಿಗಳು. ಪಶುಪಾಲನೆ ತೀರ ಅಪ್ರಾಮುಖ್ಯವಾಗಿದ್ದು ಬೇಸಾಯದ ಆರಂಭಿಕ ಹಂತದಲ್ಲಿರುವ ಇವರ ಸಮಾಜ ಮಾತೃಪ್ರಧಾನವಾದದ್ದು.

ಮಾನವ ಮೊತ್ತಮೊದಲು ನಾಗರಿಕತೆಯ ಮಜಲನ್ನು ಮುಟ್ಟಿದ ಮೆಸೊಪೊಟಾಮಿಯ, ಈಜಿಪ್ಟ ಮತ್ತು ಸಿಂಧೂ ಬಯಲಿನ (ಹರಪ್ಪಾ, ಮೊಹೆಂಜೊದಾರೊ) ಸಮಾಜಗಳು ಆರಂಭದಲ್ಲಿ ಇಂಥ ಸ್ತ್ರೀಪ್ರಧಾನ ಸಮಾಜಗಳಾಗಿದ್ದವು. ಇಲ್ಲೆಲ್ಲಾ ಬೇಸಾಯವೇ ಮುಖ್ಯವಾಗಿದ್ದು, ಪಶುಪಾಲನೆ ಅಪ್ರಧಾನವಾಗಿತ್ತು.

ಸ್ತ್ರೀ ಮಾಂತ್ರಿಕರು

ಈ ರೀತಿಯ ಸ್ತ್ರೀ ಪ್ರಧಾನ ಸಮಾಜಗಳಲ್ಲಿ ದೇವತಾರಾಧನೆ ಆರಂಭವಾಗುವುದಕ್ಕೆ ಮುನ್ನವೇ ಸ್ತ್ರೀಯರೇ ಸಮಾಜದ ಮುಖ್ಯ ಮಾಂತ್ರಿಕರಾಗಿದ್ದರು. ಅದರಲ್ಲೂ ಬೇಸಾಯಕ್ಕೆ ಸಂಬಂಧಿಸಿದ ಎಲ್ಲ ಮಾಂತ್ರಿಕ ಕ್ರಿಯೆಗಳೂ ಸ್ತ್ರೀಯರಿಂದಲೇ ನಡೆಸಲ್ಪಡುತ್ತಿದ್ದವು.

• ಚೀಯೆನ್ ಪಂಗಡದ ರೆಡ್ ಇಂಡಿಯನರ ಧಾನ್ಯ ನೃತ್ಯ ಪಡ್ಡೆ ಹುಡುಗಿಯರ ಮತ್ತು ಮಧ್ಯ ವಯಸ್ಸಿನ ಸ್ತ್ರೀಯರ ಗುತ್ತಿಗೆಯಾಗಿತ್ತು. ಈ ನೃತ್ಯದ ನಾಯಕಿ ಜೋಳದ ಪವಿತ್ರ ತೆನೆಯೊಂದನ್ನು ಒಂದು ಕಡ್ಡಿಗೆ ಕಟ್ಟಿ ಅದನ್ನು ತನ್ನ ಕಿವಿಯ ತೂತಿನಲ್ಲಿ ಧರಿಸುತ್ತಿದ್ದಳು. ಸಿಂಹೋವ ಇಂಡಿಯನರಲ್ಲಿ ಹೊಲದ ಫಲವಂತಿಕೆಗೆ ಸಂಬಂಧಿಸಿದ ಎಲ್ಲ ಮಾಂತ್ರಿಕ ಕ್ರಿಯೆಗಳನ್ನೂ ಸ್ತ್ರೀಯರೇ ನಡೆಸುತ್ತಿದ್ದರು.

• ಕ್ಯಾನರಿ ದ್ವೀಪಗಳ ಗುವಾಂಚ ಜನಗಳಲ್ಲಿ ಮಳೆ ತರಿಸುವ ಮಾಂತ್ರಿಕ ಕ್ರಿಯೆ ಸ್ತ್ರೀಯರ ಪಾಲಿನದಾಗಿತ್ತು. ಇದಕ್ಕೋಸ್ಕರ ಈ ಸ್ತ್ರೀ ಮಾಂತ್ರಿಕರು ಸಮುದ್ರ ತೀರಕ್ಕೆ ತೆರಳಿ ಕೋಲುಗಳಿಂದ ನೀರನ್ನು ಮಂತ್ರೋಕ್ತವಾಗಿ ಬಡಿಯುತ್ತಿದ್ದರು.

ಎಸ್. ಆರ್. ಭಟ್

• ಪ್ರಾಚೀನ ಗ್ರೀಸ್‌ನಲ್ಲಿ ಬೇಸಾಯದ ದೇವತೆ ಡಯೋನೀಸಿಯಸ್‌ಗೆ ಸಂಬಂಧಿಸಿದ ಮಾಂತ್ರಿಕ ಕ್ರಿಯೆಗಳನ್ನೆಲ್ಲ ಹೆಂಗಸರೇ ಮಾಡುತ್ತಿದ್ದರು. ಇತಿಹಾಸ ಕಾಲದ ಆರಂಭದಲ್ಲಿ ಕೂಡ ಪುರುಷರಿಗೆ ಅವನ ಗುಡಿಯನ್ನು ಪ್ರವೇಶಿಸುವ ಅಧಿಕಾರವಿರಲಿಲ್ಲ.

ಬಳಿಕ ದೇವತಾರಾಧನೆ ಬಳಕೆಗೆ ಬಂದಾಗ ಈ ಸ್ತ್ರೀ ಮಾಂತ್ರಿಕರೇ ಇಂಥ ಸಮಾಜಗಳ ಮೊದಲ ಧರ್ಮ ಗುರುಗಳೂ ಪುರೋಹಿತರೂ ಆಗಿ ಪರಿಣಮಿಸಿದರು.

ಸ್ತ್ರೀ ಪುರೋಹಿತರು

ಹೀಗಾಗಿ ಸಿಂಧೂ ಬಯಲಿನಿಂದ ರೋಮ್‌ನ ತನಕ ನಾಗರಿಕತೆಯ ಮೊದಲ ಹಂತದಲ್ಲಿ ಪ್ರಾಚೀನ ಜಗತ್ತು ಇಂಥ ಸ್ತ್ರೀ ಪುರೋಹಿತರಿಂದ ತುಂಬಿತ್ತು. ರೋಮ್

ನಲ್ಲಿ ಬಹುಕಾಲದವರೆಗೆ ಕನ್ಯಾವ್ರತಿಗಳಾಗಿದ್ದ ಪುರೋಹಿತೆಯರೇ ದೇವತೆಗಳ ಬಲಿ ಪೀಠದ ಮೇಲೆ ಉರಿಯುತ್ತಿದ್ದ ಪವಿತ್ರಾಗ್ನಿಯ ಸಂರಕ್ಷಕರಾಗಿದ್ದರು. ಡೆಲ್ಫಿ ಮತ್ತು ಡೊಡೋನಾಗಳಲ್ಲಿದ್ದ ಗ್ರೀಸ್‌ನ ಅತ್ಯಂತ ಪವಿತ್ರ ದೇವಾಲಯಗಳ ಪುರೋಹಿತರು ಸ್ತ್ರೀಯರಾಗಿದ್ದರು. ಪುರಾತನ ಒಲಿಂಪಿಕ್ ಪಂದ್ಯಗಳ ವೇಳೆ ಆಕೆಯ ಪುರೋಹಿತೆಯರಿಂದಲೇ ಪಡೆಯುತ್ತಿದ್ದ." (ಬ್ರಿಫಾಲ್ಟ್‌ರಿಂದ ಉಲ್ಲೇಖಿತ)

ಮಾತೃ ದೇವತೆಗಳು

ಸ್ವಾಭಾವಿಕವಾಗಿಯೇ ಇಂಥ ಸ್ತ್ರೀ ಪ್ರಧಾನ ಸಮಾಜಗಳಲ್ಲಿ ಸ್ತ್ರೀ ದೇವತೆಗಳು ಪುರುಷ ದೇವತೆಗಳಿಗಿಂತ ಹೆಚ್ಚು

ಬೆಂಗಳೂರಿನ ಕರಗ

"ಬೆಂಗಳೂರಿನ ಕರಗ ಉತ್ಸವವು ಉತ್ತರ ಅರ್ಕಾಟ್ ಜಿಲ್ಲೆಯಿಂದ ವಲಸೆ ಬಂದ ಮೂಲತಃ ತರಕಾರಿ ಬೆಳೆಗಾರರಾಗಿರುವ ತಿಗಳರು ಎಂಬ ವೃತ್ತಿಪರ ಜಾತಿಯವರ ಉತ್ಸವ. ಅದು (ಭೂಮಿಯ) ಫಲವಂತಿಕೆಗೆ ಸಂಬಂಧಿಸಿದ ಅವರ ವಾರ್ಷಿಕ ಧಾರ್ಮಿಕ ಕ್ರಿಯೆ. ಒಂದು ಚಿನ್ನದ ತಾಯಿತವನ್ನು ಒಳಗೊಂಡ ಮಣ್ಣಿನ ಕುಡಿಕೆ ಈ ಉತ್ಸವದಲ್ಲಿನ ಮುಖ್ಯ ಆರಾಧ್ಯ ವಸ್ತು. ಉತ್ಸವದ ಅಂತಿಮ ಮೆರವಣಿಗೆಯಲ್ಲಿ ಪ್ರಧಾನ ಪಾತ್ರಿ (ಅರ್ಚಕ, ತಿಗಳರ ಆನುವಂಶಿಕ ಪುರೋಹಿತ) ಮಡಿಕೆಯನ್ನು ತನ್ನ ತಲೆಯ ಮೇಲೆ ಹೊತ್ತುಕೊಳ್ಳುತ್ತಾನೆ; ಆದರೆ ಆತ ಸ್ತ್ರೀ ವೇಷವನ್ನು ಧರಿಸುತ್ತಾನೆ. ಉತ್ಸವದ ಮೊದಲಿನಿಂದ ಕೊನೆಯ ತನಕ ಅವನ ಹೆಂಡತಿ ಏಕಾಂತದಲ್ಲಿರಬೇಕೆಂಬ ನಿಯಮವಿದೆ.... ಇವು ಆರ್ಯ ಮೂಲದ ಆಚರಣೆಗಳಲ್ಲ ಎಂಬುದು ಸ್ವಯಂವೇದ್ಯ. ಇವುಗಳನ್ನು ಕೇವಲ 150 ವರ್ಷಗಳಿಗಿಂತಲೂ ಈಚೆಗೆ ಬ್ರಾಹ್ಮಣೀಕರಿಸಲಾಯಿತೆಂಬುದು ವಿವಾದಾತೀತವಾದ ವಿಷಯ. ಇದರ ಪರಿಣಾಮವಾಗಿ (ಮಡಿಕೆಯೊಳಗಿನ) ಚಿನ್ನದ ತಾಯಿತವನ್ನು ಪಂಚ ಪಾಂಡವರ ಪತ್ನಿಯಾದ ದ್ರೌಪದಿಯ "ಶಕ್ತಿ"ಯ ಪ್ರತೀಕವೆಂದು ಈಗ ಪರಿಗಣಿಸಲಾಗುತ್ತದೆ. ಕರಗದ ಮುಮ್ಮಡಿ ಮಡಿಕೆಯಲ್ಲಿ ಈ ಪಂಚ ಪಾಂಡವರ ಪ್ರತಿನಿಧಿಗಳಾಗಿ ನಿಂಬೆ ಹಣ್ಣುಗಳನ್ನು ಇಡಲಾಗುತ್ತದೆ. ಇವುಗಳೊಂದಿಗೆ ಈ ಮಡಿಕೆಯಲ್ಲಿ ಸ್ವಲ್ಪ ನೀರೂ ಇರುತ್ತದೆ. ನಗರದಲ್ಲಿನ ಭವ್ಯವಾದ ಧರ್ಮರಾಯನ ದೇವಸ್ಥಾನ ಈ ತಿಗಳರ ಮುಖ್ಯ ಆರಾಧನಾ ಕೇಂದ್ರ......ಈ ಸಮಗ್ರ ಉತ್ಸವವು ತಿಗಳ ಹೆಂಗಸರಿಂದ ಗಂಡಸರು ತಮ್ಮ ವಶಕ್ಕೆ ತೆಗೆದುಕೊಂಡ ಆಚರಣೆ ಎಂಬುದು ಬಹಳ ಸ್ಪಷ್ಟ. ಈ ಉತ್ಸವದ ಮಡಿಕೆಯನ್ನು ಕೈಯಿಂದಲೇ ತಯಾರಿಸಿ, ಬಿಸಿಲಿನಲ್ಲಿ ಒಣಗಿಸಬೇಕೆಂಬ ಕಟ್ಟು ಪಾಡಿದೆ. ಇಷ್ಟೇ ಅಲ್ಲ; ಅದನ್ನು ಒಂದು ನಿರ್ದಿಷ್ಟ ಕೆರೆಯ ಮಣ್ಣಿನಿಂದಲೇ ಮಾಡಬೇಕು. ಅದೇ ಕೆರೆಯಲ್ಲಿ ಮಡಿಕೆಯನ್ನು ವಿಸರ್ಜಿಸುವುದರೊಂದಿಗೆ ಉತ್ಸವ ಮುಕ್ತಾಯವಾಗುತ್ತದೆ. ಆದರೆ ದ್ರೌಪದಿಯ "ಶಕ್ತಿ"ಯಾದ ಚಿನ್ನದ ತಾಯಿತವನ್ನು ಮಾತ್ರ ಅರ್ಚಕ ಸದ್ದಿಲ್ಲದೆ ಕೆರೆಯಿಂದ ಮೇಲೆತ್ತುತ್ತಾನೆ, ಮುಂದಿನ ವರ್ಷ ಉಪಯೋಗಿಸುವ ಸಲುವಾಗಿ. ಒಂಬತ್ತು ದಿವಸ ಕಾಲ ನಡೆಯುವ ಈ ಉತ್ಸವ ಚೈತ್ರ ಪೂರ್ಣಿಮೆಯಂದು ದೊಡ್ಡ ಮೆರವಣಿಗೆಯೊಂದಿಗೆ ಅಂತ್ಯಗೊಳ್ಳುತ್ತದೆ.

–ಡಿ. ಡಿ. ಕೋಸಾಂಬಿ

ಯಲ್ಲಿ ಡಿಮಿಟರ್ ದೇವಿಯ ಪ್ರಧಾನ ಪುರೋಹಿತೆಯನ್ನು ಸಿಂಹಾಸನದಲ್ಲಿ ಕುಳ್ಳಿರಿಸಿ ಗೌರವಿಸಲಾಗುತ್ತಿತ್ತು.

"ಗ್ರೀಸ್‌ನಂತೆ ಬಾಬಿಲೋನಿಯ ಮತ್ತು ಅಸ್ಸೀರಿಯಗಳಲ್ಲೂ (ಮೆಸೊಪೊಟಾಮಿಯ) ಸ್ತ್ರೀಯರೇ ದೇವರುಗಳ ಇಚ್ಛೆಯನ್ನು ಪ್ರಕಟಿಸುವ ಪುರೋಹಿತರಾಗಿದ್ದರು. (ಅಸ್ಸೀರಿಯದ ರಾಜ) ಎಸ್ಸಾರ್‌ಹಾಡ್ಡನ್ ಅರ್ಬೇಲಾದ ಇಶ್ಟಾರ್ ದೇವಿಯ ಆಜ್ಞೆ, ಅನುಜ್ಞೆಗಳನ್ನು ಮುಖ್ಯರಾಗಿದ್ದರು. ಇವರಲ್ಲಿ ಈಜಿಪ್ಟಿನ "ಐಸಿಸ್", ಫ್ರಿಜಿಯಾದ "ಸೀಬೇಲೆ", ಮೆಸೊಪೊಟಾಮಿಯಾದ "ಇಶ್ಟಾರ್", ಗ್ರೀಸ್‌ನ "ಡಿಮಿಟರ್" ಮೊದಲಾದವರು ಪ್ರಕೃತಿ ಮಾತೆಯ ಪ್ರತೀಕವಾಗಿದ್ದು, ಈ ಸಮಾಜಗಳು ಪಿತೃಪ್ರಧಾನವಾದನಂತರ ಸಹ ಅವರಿಗೆ ಮಹತ್ವದ ಸ್ಥಾನವಿತ್ತು.

ಹೀಗೆ ಬೇಸಾಯಕ್ಕೂ, ಸ್ತ್ರೀಪ್ರಾಧಾನ್ಯಕ್ಕೂ, ಮಾತೃ

ದೇವತೆಗಳಿಗೂ ನಿಕಟ ಸಂಬಂಧವಿದೆ. ಕೃಷಿಯೇ ಪ್ರಧಾನ ಉದ್ಯಮವಾಗಿರುವ ಭಾರತದ ಗ್ರಾಮೀಣ ಪ್ರದೇಶಗಳಲ್ಲಿ ಈ ರೀತಿಯ ಅನೇಕ ಅನಾರ್ಯ ಮಾತೃ ದೇವತೆಗಳನ್ನು ಇಂದಿಗೂ ಪೂಜಿಸಲಾಗುತ್ತಿದೆ. ದೊಂಬಿ, ಬುಡುಬುಡುಕಿ, ಸವರಿ, ನೈರಮಣಿ, ಮಾರಮ್ಮ ಇತ್ಯಾದಿ. ಬೆಂಗಳೂರಿನ ಅಣ್ಣಮ್ಮನೂ ಈ ಸಾಲಿಗೆ ಸೇರಿದ ಒಂದು ಮಾತೃ ದೇವತೆ. ಹಿಂದೆ ಇವಳು ಬೆಂಗಳೂರಿನ ಸುತ್ತು ಮುತ್ತಲಿನ ಬೇಸಾಯಗಾರ ಸಮಾಜದ ಗ್ರಾಮದೇವತೆಯಾಗಿದ್ದಿರಬೇಕು.

> ಬೇಸಾಯ, ಸ್ತ್ರೀ ಪ್ರಾಧಾನ್ಯ, ಹೊಲಗಳ ಫಲವಂತಿಕೆಗಾಗಿ ಮಾಡುವ ಧಾರ್ಮಿಕ ಕ್ರಿಯೆಗಳು ಮತ್ತು ಸ್ತ್ರೀ ಪೌರೋಹಿತ್ಯ– ಇವುಗಳೆಲ್ಲ ಹೇಗೆ ಒಂದಕ್ಕೊಂದು ಅಂಟಿಕೊಂಡಿವೆ ಎಂಬುದನ್ನು ಕರಗದ ಬಗೆಗಿನ ಕೋಸಾಂಬಿಯವರ ವಿವರಣೆ ಬಹಳ ಸ್ಪಷ್ಟವಾಗಿ ತೋರಿಸುತ್ತದೆ. ನಿಜ, ಕರಗದ ಅರ್ಚಕರಂತೆ ಪುರುಷ ಪುರೋಹಿತರು ಸ್ತ್ರೀ ವೇಷ ಧರಿಸುವ ಪದ್ಧತಿ ಇಂದು ಬಹಳ ವಿರಳ. ಆದರೆ ಸಮಾಜವು ಪುರುಷ ಪ್ರಧಾನವಾಗಿ ಪರಿವರ್ತನೆಗೊಂಡ ಆರಂಭದಲ್ಲಿ ಅದು ಎಷ್ಟು ವ್ಯಾಪಕವಾಗಿದ್ದಿರಬೇಕು ಎಂಬುದನ್ನು ಇದರಿಂದ ನಾವು ಊಹಿಸಬಹುದು.

ಯೋನಿಯೇ ಮುಖ್ಯ ಆರಾಧನಾ ಸಾಧನವಾಗಿದ್ದು, ವಿಶ್ವದ ಚಾಲಕ ಶಕ್ತಿ ಸ್ತ್ರೀತತ್ವವೆಂದು ಪರಿಗಣಿಸುವ ಒಂದು ಧಾರ್ಮಿಕ ಸಂಪ್ರದಾಯ ಭಾರತದಲ್ಲಿ ಈಗಲೂ ಇದೆ. ಒಂದು ಕಾಲದಲ್ಲಿ ಬಹಳ ಪ್ರಬಲವಾಗಿದ್ದ ಇದು, ವೈದಿಕ ಸಂಪ್ರದಾಯಕ್ಕೆ ತೀರ ವಿರುದ್ಧವಾದ ತಾಂತ್ರಿಕ ಅಥವಾ ಶಾಕ್ತ ಸಂಪ್ರದಾಯ. ಇದರ ಪ್ರಕಾರ ಮಾತೃ ಶಕ್ತಿಯೇ ವಿಶ್ವದ ಮೂಲ. ಅವಳನ್ನು ಆದಿಶಕ್ತಿ, ಪರಾಶಕ್ತಿ, ಜಗದಂಬೆ, ತ್ರಿಪುರ ಸುಂದರಿ ಎಂದೆಲ್ಲ ಕರೆಯಲಾಗುತ್ತದೆ. ಈ ಸಂಪ್ರದಾಯವು ಕೃಷಿ ಪ್ರಧಾನ ಸಮಾಜವಾಗಿದ್ದ ಸಿಂಧೂ ಬಯಲಿನ ನಾಗರಿಕತೆಯ ಕೊಡುಗೆಯಾಗಿದ್ದಿರಬೇಕೆಂದು ಅನೇಕ ವಿದ್ವಾಂಸರು ಆಧಾರಪೂರ್ವಕವಾಗಿ ವಾದಿಸಿದ್ದಾರೆ.

ದುರ್ಗಾಪೂಜೆ

ವೈದಿಕ ಹಿಂದೂ ಸಂಪ್ರದಾಯದಲ್ಲೂ ನವರಾತ್ರಿ ಉತ್ಸವದ ರೂಪದಲ್ಲಿ ಈ ಮಾತೃ ದೇವತಾರಾಧನೆ ಸ್ವಲ್ಪ ಮಟ್ಟಿಗೆ ಉಳಿದುಕೊಂಡಿದೆ. ಈ ಉತ್ಸವದ ಆರಾಧ್ಯ ದೇವತೆ ದುರ್ಗೆ ಅಥವಾ ದೇವಿ. ವಾಸ್ತವವಾಗಿ ಇದು ಬೇಸಾಯಕ್ಕೆ ಸಂಬಂಧಪಟ್ಟ ಉತ್ಸವವೆಂದೂ, ಭೂಮಿಯ ಫಲವಂತಿಕೆಯನ್ನು ಹೆಚ್ಚಿಸಲು ಮಾಡುವ ಪೂಜೆಯೆಂದೂ, ಆದುದರಿಂದ ಈ ದುರ್ಗೆಯು ಪ್ರಕೃತಿ ಮಾತೆಯ ಪ್ರತೀಕವೆಂದೂ ಪ್ರೊ|| ಡಿ. ಡಿ. ಕೋಸಾಂಬಿ ಮತ್ತು ದೇವಿಪ್ರಸಾದ ಚಟ್ಟೋಪಾಧ್ಯಾಯ-ಇವರಿಬ್ಬರೂ ಅಭಿಪ್ರಾಯ ಪಟ್ಟಿದ್ದಾರೆ. ಈ ಪೂಜೆಯ ತಿರುಳು ಘಟ ಸ್ಥಾಪನೆ ಅಥವಾ ಘಟಪೂಜೆಯೆಂದು ಅವರ ಅಭಿಪ್ರಾಯ. ಇದರ ಅರ್ಥ ಬಹಳ ಸ್ಪಷ್ಟ. ಘಟ, ಅರ್ಥಾತ್ ಮಡಿಕೆ ಯಾವಾಗಲೂ ಗರ್ಭದ ಸಂಕೇತ. ಫಲ, ಸಸ್ಯ, ಧಾನ್ಯಗಳಿಂದ ತುಂಬಿದ ಈ ಮಡಿಕೆಯನ್ನು ಸ್ತ್ರೀ ಜನನೇಂದ್ರಿಯದ ಸಾಂಕೇತಿಕ ಚಿತ್ರದ ಮೇಲೆ ಸ್ಥಾಪಿಸುವುದೆಂದರೆ, ಭೂಮಿ ಫಲಭರಿತವಾಗಿ ಸಮೃದ್ಧ ಬೆಳೆ ಕೊಡಲಿ ಎಂದು ಹಾರೈಸುವುದೇ ಹೊರತು ಬೇರೇನಲ್ಲ. ಈ ಉತ್ಸವ ನಡೆಯುವುದೂ ಸಹ ಅಕ್ಟೋಬರ್ ತಿಂಗಳಲ್ಲಿ–ಅಂದರೆ ಪೈರು ಬೆಳೆದು ಕೊಯ್ಲಿಗೆ ಸಿದ್ಧವಾಗುವ ಸಮಯದಲ್ಲಿ. ಹಿಂದೂ ಪುರಾಣಕಾರರು ಈ ರೀತಿಯಲ್ಲಿ ವೈದಿಕ ಸಂಪ್ರದಾಯಕ್ಕೆ ಅಳವಡಿಸಿಕೊಂಡಿರಬಹುದು. ಯಾಕೆಂದರೆ ದುರ್ಗೆ, ಚಂಡಿ, ಚಾಮುಂಡಿ, ಭೈರವಿ, ಕಾಳಿ, ದೇವಿ– ಎಂಬ ನಾನಾ ನಾಮಗಳಿಂದ ಪ್ರಸಿದ್ಧಳಾಗಿರುವ ಈಕೆ ಒಂದು ಪೌರಾಣಿಕ ದೇವತೆಯೇ ಹೊರತು ವೈದಿಕ ದೇವತೆಯಲ್ಲ. ಋಗ್ವೇದದಲ್ಲಿ ಎಲ್ಲೂ ಇವಳ ಹೆಸರಿಲ್ಲ.

ಬದಲಾವಣೆ

ಇವೆಲ್ಲಾ ಬೇಸಾಯಕ್ಕೂ ಮಾತೃ ದೇವತಾರಾಧನೆಗೂ ಬಹಳ ಹತ್ತಿರವಾದ ಸಂಬಂಧವಿದೆ ಎಂಬುದನ್ನು ತೋರಿಸುತ್ತದೆ. ಆರಂಭದಿಂದಲೂ ಬೇಸಾಯವೇ ಮುಖ್ಯವಾಗಿದ್ದ ಇತರ ಪ್ರಾಚೀನ ನಾಗರಿಕ ಸಮಾಜಗಳಲ್ಲಿ ಸ್ತ್ರೀ ಪ್ರಾಧಾನ್ಯ, ಮಾತೃ ದೇವತಾರಾಧನೆ ಮತ್ತು ಸ್ತ್ರೀ ಪೌರೋಹಿತ್ಯಗಳು ವ್ಯಾಪಕವಾಗಿ ಜಾರಿಯಲ್ಲಿದ್ದವು. ಆದರೆ ಕೆಲವು ಕಾಲಾನಂತರ ಬೇಸಾಯ ಕ್ರಮದಲ್ಲಿ ಸುಧಾರಣೆಯಾಗಿ, ಅಗೆಕೋಲಿನಿಂದ ನೇಗಿಲಿಗೆ

12ನೇ ಪುಟಕ್ಕೆ

ಸಂವಾದ

ಸೌಂದರ್ಯಸ್ಪರ್ಧೆ ಏಕೆ?

'ಸೌಂದರ್ಯ ಸ್ಪರ್ಧೆ'ಯ ವಿವಿಧ ಮುಖಗಳನ್ನು ಕುರಿತಂತೆ ವಿಶ್ವಸುಂದರಿ ಸ್ಪರ್ಧೆಯಲ್ಲಿ ಭಾಗವಹಿಸಿದ 'ಮಿಸ್ ಇಂಡಿಯ' ಬಿರುದು ಪಡೆದ ಕುಮಾರಿ ವಿನಿತಾ ವಾಸನ್ ಮತ್ತು ಕೆ. ಎಸ್. ಐ. ಸಿ. ಯ ರೂಪದರ್ಶಿ ಶ್ರೀಮತಿ ಕಲ್ಪನಾ ಶಿಂಧೆಯವರಿಗೆ ಕೆಲವು ಪ್ರಶ್ನೆಗಳನ್ನು ಕೇಳಲಾಯಿತು. ಶ್ರೀಮತಿ ನೇಮಿಚಂದ್ರರವರ ಸಂದರ್ಶನದಲ್ಲಿ ಈ ಇಬ್ಬರು ಮಹಿಳೆಯರ ಅಭಿಪ್ರಾಯಗಳನ್ನು ಇಲ್ಲಿ ಕೊಡಲಾಗಿದೆ.

ಪ್ರಶ್ನೆ : ಓರ್ವ ವ್ಯಕ್ತಿಯನ್ನು ಸುಂದರವಾಗಿ ಕಾಣಿಸುವುದು ಯಾವುದು ?

—"ಸುಂದರವಾದ ಮುಖ, ಅಂಗಸೌಷ್ಠವ, ಜೊತೆಗೇ ಆತ್ಮವಿಶ್ವಾಸ ಇಷ್ಟಿರಬೇಕು" ಎಂದು ವಿನಿತಾ ಅಭಿಪ್ರಾಯಪಟ್ಟರು. ಕಲ್ಪನ ಅದೇ ಮಾತುಗಳಿಗೆ ಸ್ವಲ್ಪ ವಿವರಣೆ ನೀಡಿ—"ಅಂದ ಚಂದ ಒಂದು ರೀತಿ ವಂಶಪಾರಂಪರ್ಯವಾದದ್ದು. ನೋಡೋಕೆ ಚೆನ್ನಾಗಿರಬೇಕು, ಜೊತೆಗೇ ಒಳ್ಳೆ ಮನಸ್ಸೂ ಬೇಕು. ಸೌಂದರ್ಯ ಅಂತರ್ಯದಿಂದ ಬರುವಂಥದ್ದು" ಎಂದು ಮುಗಿಸಿದರು.

ಪ್ರಶ್ನೆ : ಈ ಸೌಂದರ್ಯ ಸ್ಪರ್ಧೆಗಳಿಗೆ ಹಾಗೂ ರೂಪದರ್ಶಿ ಕೆಲಸಕ್ಕೆ ಸೇರಲು ಮುಖ್ಯ ಪ್ರೇರಣೆ?

—ಸೌಂದರ್ಯ ಸಾಧನಗಳಲ್ಲಿ ತೀವ್ರ ಆಸಕ್ತಿ, ಇದ್ದು, ಅಷ್ಟೇ ಸುಂದರವಾಗಿರುವ ವಿನಿತಾ ಪ್ರಸಿದ್ಧಿಗೆ ಬರಲು ಸೌಂದರ್ಯ ಸ್ಪರ್ಧೆಗಳು ಸಹಾಯವಾದಂತೆ, ರೂಪದರ್ಶಿಯ ಕೆಲಸ ಕಲ್ಪನರವರಿಗೆ ಜನರ ಮೆಚ್ಚುಗೆ ತಂದು ಕೊಟ್ಟಿದೆ. —"ಪ್ರಶಂಸೆ, ಪ್ರಸಿದ್ಧಿ ಯಾರಿಗೆ ಬೇಡ ? ನಾಲ್ಕು ಜನ ನೋಡಿ ಮೆಚ್ಚಿದಾಗ ನನಗೆ ಬಹಳ ಖುಷಿ ಎನಿಸುತ್ತೆ. ನನ್ನಲ್ಲಿ ಆತ್ಮವಿಶ್ವಾಸ ಹೆಚ್ಚುತ್ತದೆ. ಸುಂದರವಾಗಿ ಕಾಣಬೇಕು ಎಂಬ ಬಯಕೆ ಎಷ್ಟು ಸಹಜವಾದದ್ದೋ, ನಾಲ್ಕು ಜನರ ಪ್ರಶಂಸೆಗೆ ಹಿಗ್ಗುವುದೂ ಅಷ್ಟೇ ಸ್ವಾಭಾವಿಕವಾದದ್ದು" ಎಂದು ಕಲ್ಪನ ಅಭಿಪ್ರಾಯಪಟ್ಟರು.

ಪ್ರಶ್ನೆ : ಬೆಳಕಿಗೆ ಬರುವಲ್ಲಿ ಬುದ್ಧಿಯ ಬದಲು, ದೇಹವನ್ನು ಉಪಯೋಗಿಸುವ ಬಗ್ಗೆ ಹೇಗೆನಿಸುತ್ತದೆ?

—"ಇಲ್ಲಿ ಬರೀ ದೇಹದ ಕೆಲಸವಲ್ಲ, ಮಿದುಳಿನ ಆವಶ್ಯಕತೆ ಸಾಕಷ್ಟಿದೆ" ಎಂದು ಇಬ್ಬರೂ ತೀವ್ರವಾಗಿ ವಾದಿಸಿದರು. "ಸೌಂದರ್ಯ ರಾಣಿಯರೆಲ್ಲ ಶಾಲೆ ಬಿಟ್ಟ ಸುಂದರ ಮುಖದ ಖಾಲಿ ತಲೆಗಳು ಎಂಬ ಅಭಿಪ್ರಾಯವಿದೆ. ಆದರೆ ಈ ಸೌಂದರ್ಯ ಸ್ಪರ್ಧೆಗಳು ನನ್ನ ಹವ್ಯಾಸ ಮಾತ್ರ. ಬಾಕಿಯಂತೆ ನಮ್ಮ ಬುದ್ಧಿ ಪ್ರತಿಭೆಗಳನ್ನು ಬೇರೆ ರಂಗಗಳಲ್ಲಿ ಅಭಿವ್ಯಕ್ತಿಸುತ್ತಿದ್ದೇವಲ್ಲ" ಎನ್ನುವ ವಿನಿತಾ, ಬಿಡುವಿಲ್ಲದ 'ಮಾಡಲಿಂಗ್' ಕೆಲಸದಲ್ಲೂ, ಸೌಂದರ್ಯಸ್ಪರ್ಧೆಗಳ ಸಂಭ್ರಮದಲ್ಲೂ, ಅರ್ಥಶಾಸ್ತ್ರದಲ್ಲಿ ಎಂ. ಎ. ಮುಂದುವರೆಸುತ್ತಿದ್ದಾರೆ. ಕಲ್ಪನರ ಅನಿಸಿಕೆಯೂ ಅದೇ ಇತ್ತು—"ಮಾಡಲಿಂಗ್ ಬರೀ ದೈಹಿಕ ಸೌಂದರ್ಯದ ಪ್ರದರ್ಶನವಲ್ಲ. ಜಾಹಿರಾತು ಮಾಡುವ ವಸ್ತುವನ್ನು ಅಭ್ಯಸಿಸಿ, ಗ್ರಾಹಕನಿಗೆ ಮನ ಮುಟ್ಟುವಂತೆ ತಲುಪಿಸುವಲ್ಲಿ ನಮ್ಮ ಬುದ್ಧಿ ಎಲ್ಲಾ ಉಪಯೋಗಿಸಬೇಕು" ಎಂದು ಒತ್ತಿ ಹೇಳಿದರು.

—"ಸೌಂದರ್ಯ ಸ್ಪರ್ಧೆಗಳಲ್ಲಿ ನಮ್ಮ ಜಾಣ್ಮೆ ಬುದ್ಧಿವಂತಿಕೆಗಳ ಪರೀಕ್ಷೆಯೂ ಉಂಟಲ್ಲ" ಎಂಬುದು ವಿನಿತಾರವರ ವಿವರಣೆಯಾಗಿತ್ತು.

ಪ್ರಶ್ನೆ : ಈಜು ಉಡುಪು ತೊಡಿಸಿ, ದೇಹದ ಇಂಚು ಇಂಚನ್ನು ಅಳೆದು, ಪ್ರದರ್ಶನದ ಬೊಂಬೆಯಾಗಿಸುವಲ್ಲಿ ಸ್ತ್ರೀ ಶೋಷಣೆ ಇಲ್ಲವೆ?

—ಈಜು ಉಡುಪು ಅಶ್ಲೀಲವಾದದ್ದೇನೂ ಅಲ್ಲ. ಈಜುಕೊಳದಲ್ಲಿ ಹಾಕುವುದಿಲ್ಲವೆ? ಪಿ. ಟಿ. ಉಷಾ ಚಡ್ಡಿ ಹಾಕುವುದು ಅಸಭ್ಯವೇ ? ಆಯಾ ಸ್ಪರ್ಧೆಗಳ ನಿಯಮ

ಗಳಿಗೆ ಬದ್ಧರಾಗಿ ಇರಬೇಕಾಗುತ್ತದೆ. ಈಜು ಉಡು ಪೊಂದೇ ಅಲ್ಲ, ಬೇರೆಲ್ಲ ಬಗೆಯ ದೇಶೀಯ ಉಡುಪು ಗಳನ್ನು ನಾವು ತೊಡಬೇಕು. ವಿದೇಶದ ವಾತಾವರಣ ದಲ್ಲಿ ಉಳಿದೆಲ್ಲರಂತೆ ಈಜು ಉಡುಪು ಧರಿಸುವಲ್ಲಿ ಯಾವ ಮುಜುಗರವೂ ಎನಿಸಲಿಲ್ಲ, ನೋಡುವ ಸಭಿಕರ ದೃಷ್ಟಿಯೂ ಹಾಗಿರಲಿಲ್ಲ. ಸೌಂದರ್ಯ ಸ್ಪರ್ಧೆ ಬೇರೆಲ್ಲ ಆಟಪಾಟಗಳಂತೆ ಕ್ರೀಡಾಭಾವದಿಂದ, ಸ್ಪರ್ಧಾ ಮನೋ ಭಾವದಿಂದ ಭಾಗವಹಿಸಬೇಕಾದದ್ದು. ಇಲ್ಲಿ ನನಗೆ ಸ್ತ್ರೀ ಶೋಷಣೆ ಏನೂ ಕಂಡು ಬಂದಿಲ್ಲ" ಎಂದು ವಿನಿತಾ ದೀರ್ಘವಾಗಿ ಉತ್ತರಿಸಿದರು.

> "ಸೌಂದರ್ಯ ಸ್ಪರ್ಧೆಗಳು, ಕೆಲವು ಬಾಹ್ಯ ಸೌಂದರ್ಯದ ಅಳತೆಗೋಲುಗಳು" ಎಂದು ಕಲ್ಪನ ಒಪ್ಪಿದರೆ, ವಿನಿತಾರವರ ಸಮರ್ಥನೆ ಹೀಗಿತ್ತು:
> —"ಬರೀ ಅಂಗಸೌಷ್ಠವದಿಂದ ಗೆಲ್ಲಲು ಸಾಧ್ಯವಿಲ್ಲ. ಅದನ್ನು ಎಷ್ಟು ಆತ್ಮವಿಶ್ವಾಸದಿಂದ ತೋರಬಲ್ಲಿರಿ, ಜನ ರೊಡನೆ ಎಷ್ಟು ಸಲೀಸಾಗಿ ಬೆರೆಯಬಲ್ಲಿರಿ, ಚುರುಕಾಗಿ ಸಂಭಾಷಿಸುವ ಬಗೆ, ನಡೆ ನುಡಿಯ ವೈಶಿಷ್ಟ್ಯ.......... ಹೀಗೆ ಒಟ್ಟು ವ್ಯಕ್ತಿತ್ವವನ್ನು ತೂಗಿ ನೋಡುತ್ತಾರೆ".

ಪ್ರಶ್ನೆ : ಸ್ಪರ್ಧೆಗಳಿಗಾಗಿ, ಜಾಹಿರಾತುಗಳಿಗಾಗಿ ದೇಹ ಪ್ರದರ್ಶಿಸುವುದು, ಕ್ಯಾಬರೆ ನರ್ತಕಿಯರ ದೇಹ ಪ್ರದರ್ಶನಕ್ಕಿಂತ ಬೇರೆಯಾದದ್ದು ಎಂದು ಹೇಗೆ ಹೇಳುತ್ತೀರಿ ?

—"ಕ್ಯಾಬರೆ ನರ್ತಕಿಯರ ಪ್ರಚೋದನೆಯ ಅಶ್ಲೀಲ ಉದ್ದೇಶ ಇಲ್ಲಿಲ್ಲ" ಎಂದು ಸಮಾಧಾನವಾಗಿಯೇ ಈರ್ವರೂ ಉತ್ತರಿಸಿದರು. "ಸ್ಪರ್ಧೆಗೆ ಮಾತ್ರ ಈಜು ಉಡುಪು ಧರಿಸಿದ್ದೆ. ಉಳಿದಂತೆ ದೇಹಪ್ರದರ್ಶನಕ್ಕೆ ನನ್ನ ಒಪ್ಪಿಗೆ ಇಲ್ಲ. ನಾ ಆರಿಸಿಕೊಂಡಿರುವ ಜಾಹಿರಾತುಗಳ ಲ್ಲೆಲ್ಲ ಮೈತುಂಬ ಸೀರೆ ಉಟ್ಟು, ತುಂಬು ತೋಳಿನ ರವಿಕೆ ಧರಿಸಿರುವೆ" ಎಂದು ವಿನಿತಾ ಸ್ಪಷ್ಟಪಡಿಸಿದರು. ಸಿಲ್ಕ್ ಸೀರೆಗಳ ಜಾಹಿರಾತುಗಳಿಗೆ ರೂಪದರ್ಶಿಯಾದ ಕಲ್ಪನಾರ ಅಭಿಪ್ರಾಯವೂ ಬೇರೆಯಾಗಿರಲಿಲ್ಲ.

ಪ್ರಶ್ನೆ : ಸಮಾಜಕ್ಕೆ ನಿಮ್ಮ ಕೊಡುಗೆ ಏನು ?

—"ಬ್ಯೂಟಿ ಕ್ಲಿನಿಕ್ ತೆರೆಯುವ ಉದ್ದೇಶವಿದೆ. ಆಗ ಉಚಿತವಾಗಿ ಅವಶ್ಯಕತೆ ಇರುವವರಿಗೆ ಹೇಳಿಕೊಡುವೆ. ದಾನ ಧರ್ಮ ಮಾಡುವೆ" ಎಂದು ಸ್ವಲ್ಪ ಬಾಲಿಶವಾಗಿ ವಿನಿತಾ ಉತ್ತರಿಸಿದರು. —"ಯಾವುದೇ ವೃತ್ತಿ ಸಮಾಜಕ್ಕೆ ನೀಡುವ ಕೊಡುಗೆಯಷ್ಟೇ ನಮ್ಮದೂ ಇದೆ. ಜಾಹಿರಾತು ಇಂದು ದೊಡ್ಡ ಉದ್ಯಮವಾಗಿ ಬೆಳೆದಿದೆ. ಆ ವೃತ್ತಿಯಲ್ಲಿ ಭಾಗಿಯಾಗಿ, ವ್ಯಾಪಾರದಲ್ಲಿ ಅಭಿವೃದ್ಧಿ ತರುತ್ತಿರುವ ಬಗ್ಗೆ ಹೆಮ್ಮೆ ಇದೆ" ಎಂದು ಕಲ್ಪನ ಚರ್ಚೆ ಮುಗಿಸಿದರು.

ಏಕೆ ಸಹಿಸಿದ್ದಾರೆ ?

ಪ್ರಾಚೀನ ಕಾಲದಿಂದಲೂ ಪುರುಷ ಮಹಿಳೆಯನ್ನು ಒಲಿಸಿಕೊಳ್ಳಲು ಆಕೆಯನ್ನು ಗೊಂಬೆಯಂತೆ ಶೃಂಗರಿಸಲು ಆಭರಣ, ಉಡುಗೆ–ತೊಡಿಗೆಗಳ ವ್ಯಾಮೋಹದ ಬಲೆ ಯನ್ನು ಬೀಸಿದ. ಅಂದಿನಿಂದ ಇಂದಿನವರೆಗೂ ಈ ಬಲೆ ಯಿಂದ ಹೆಣ್ಣು ಬಿಡುಗಡೆ ಹೊಂದಿಲ್ಲ.

ಮಹಿಳಾ ಪ್ರಗತಿ–ಶೋಷಣೆ–ಸಮಾನತೆಯ ಬಗ್ಗೆ ಕಳ ಕಳಿಯಿಂದ ಚಿಂತಿಸುವ ಬಹುಮಂದಿ ಆಭರಣ, ಆಡಂ ಬರದ ಅಲಂಕಾರ, ಸೌಂದರ್ಯವರ್ಧಕಗಳಿಂದ ಮುಕ್ತ ರಾಗಿಲ್ಲ ಎಂಬುದನ್ನು ನೋವಿನಿಂದಲೇ ಹೇಳಬೇಕಾಗಿದೆ. ಇನ್ನು ಸಾಮಾನ್ಯ ಹೆಣ್ಣುಗಳು ಇವೆಲ್ಲಾ ತಮ್ಮ ಶೋಷಣೆಯ ಸಂಕೇತಗಳೆಂದು ಚಿಂತಿಸಲು ಸಾಧ್ಯವೇ ? ಈ ಸೌಂದರ್ಯ ಸ್ಪರ್ಧೆಯಲ್ಲಿ ಭಾಗವಹಿಸುವ ಹೆಣ್ಣು ಗಳು ಅಲ್ಪ ಸ್ವಲ್ಪ ಕಲಿತ ಪಟ್ಟಣದ ಶ್ರೀಮಂತ-ಮಧ್ಯಮ ವರ್ಗದ ನಾಗರೀಕ ಹೆಣ್ಣುಗಳೇ ಹೊರತು ಏನೂ ಅರಿಯದ ಮುಗ್ಧರಲ್ಲ !

ಸೌಂದರ್ಯ ಸ್ಪರ್ಧೆಯಲ್ಲಿ ದೇಹದ ಇಂಚು ಇಂಚನ್ನು ಅಳೆಸಿಕೊಂಡು ಅದನ್ನು ಪ್ರದರ್ಶನಕ್ಕಿಟ್ಟು ಪುರುಷರ ಕಾಮುಕತೆಗೆ ತಮ್ಮನ್ನು ತಾವೇ ಗುರಿಮಾಡಿಕೊಳ್ಳು ತ್ತಾರೆ. ಇದಕ್ಕಿಂತ ನಾಚಿಕೆಗೇಡಿನ ಸ್ಥಿತಿ ಮತ್ತೊಂದಿಲ್ಲ. ಭಾರತೀಯ ಸಂಸ್ಕೃತಿ ಎಷ್ಟೊಂದು ಉನ್ನತವಾದದ್ದು ಎಂದು ಕೊರೆಯುವ, ಭಾರತೀಯ ನಾರಿಯ ಬಗ್ಗೆ ಗಂಟಲು ಗಟ್ಟಲೆ ಮಾತನಾಡುವ ಮಂದಿ ಈ ಸ್ಪರ್ಧೆಗಳನ್ನು ಏಕೆ

ಸಹಿಸಿದ್ದಾರೆ? ನಮ್ಮ ಸಂಸ್ಕೃತಿಯಲ್ಲಿ ಹೀಗೆ ಹೇಳೋದು ಒಂದು, ಆಚರಣೆಯಲ್ಲಿ ಮತ್ತೊಂದು ಎಂಬುದನ್ನು ಈ ಸೌಂದರ್ಯ ಸ್ಪರ್ಧೆ ಸ್ಪಷ್ಟವಾಗಿ ತಿಳಿಸುತ್ತದೆ.

ಇಂದಿನ ಮಹಿಳಾ ಶಾಲಾ–ಕಾಲೇಜುಗಳ ಉಪಾಧ್ಯಾಯಿನಿ – ವಿದ್ಯಾರ್ಥಿನಿಯರು ಪೈಪೋಟಿಯೆಂಬಂತೆ ಶೃಂಗರಿಸಿಕೊಂಡು ಬರುತ್ತಾರೆ. ವಿದ್ಯೆಯ ಕಲಿಕೆಯಲ್ಲಿ ಕಲಿಸುವುದಕ್ಕಿಂತ ಉಡುಗೆ–ತೊಡಿಗೆಗಳ ಪ್ರದರ್ಶನವೇ ಹೆಚ್ಚು. ಉಪಾಧ್ಯಾಯಿನಿಯರು ತಮ್ಮ ಸಂಬಳದ ಬಹುಪಾಲನ್ನು ಸೌಂದರ್ಯ ವರ್ಧಕಗಳಿಗೇ ಉಪಯೋಗಿಸುತ್ತಾರೆ. ಇನ್ನು ಸೌಂದರ್ಯ ಸ್ಪರ್ಧೆ–ಸೌಂದರ್ಯ ವರ್ಧಕಗಳು ಶೋಷಣೆಯ ಸಂಕೇತಗಳೆಂದು ಮುಗ್ಧ ವಿದ್ಯಾರ್ಥಿನಿಯರಿಗೆ ಯಾರು ತಿಳಿಸಬೇಕು?

ಅಶ್ಲೀಲ ಭಿತ್ತಿ ಚಿತ್ರಗಳನ್ನು ಪ್ರತಿಭಟಿಸುವಂತೆ ಮಹಿಳಾ ಸಂಘಟನೆಗಳು ಇಂತಹ ಸೌಂದರ್ಯ ಸ್ಪರ್ಧೆ ಎಲ್ಲೇ ನಡೆಯಲಿ, ಇದು ಶೋಷಣೆಯ ಸಂಕೇತ, ಗಂಡುಗಳ ಮೋಸದ ತಂತ್ರವೆಂದು ಸ್ಪರ್ಧಿಗಳಿಗೆ ತಿಳಿಹೇಳಿ ಪ್ರತಿಭಟಿಸಬೇಕು.

—ರತ್ನ ಹುಲ್ಲಳ್ಳಿ

ಅಮೂರ್ತ ಸೌಂದರ್ಯದ ಸ್ಪರ್ಧೆ

ಸೌಂದರ್ಯವೆಂಬ ಒಂದು ಅಮೂರ್ತ ಭಾವನೆಯನ್ನು ಮೂರ್ತಗೊಳಿಸುವುದಕ್ಕೆ ಹೆಣಗುತ್ತಿರುವ ಒಂದು ಜನ ವಿಭಾಗ ತಮ್ಮ ಆನಂದಕ್ಕೆ ಸರಿಹೊಂದುವುದನ್ನೆಲ್ಲಾ ಸುಂದರವೆಂದು ಸಮಾಜದಲ್ಲಿ ಪ್ರಚುರಪಡಿಸುವ, ವೈಯಕ್ತಿಕ ಲಾಭದ ಮಧುರತೆಯನ್ನು ಹಾಡಿಹೊಗಳುವ ಕನಿಷ್ಠ ವಾಂಛೆಯಿಂದ 'ಸೌಂದರ್ಯ ಸ್ಪರ್ಧೆ' ಎಂಬ ಅಮಾನವೀಯವಾದ ಹೆಣ್ಣುಗಳ ಅಂಗಪ್ರದರ್ಶನ ಏರ್ಪಡಿಸಿ ತಮ್ಮ ಭುಜವನ್ನು ತಾವೇ ಚಪ್ಪರಿಸಿಕೊಳ್ಳುತ್ತಾರೆ.

ಸೌಂದರ್ಯ ಒಂದು ಅನುಭವ; ಅಮೂರ್ತ. ಮುಟ್ಟಿ ಮೂಸಿ ಆಲಂಗಿಸುವುದಲ್ಲ. ನೋಡಿ ನಲಿದು ಮೈದುಂಬಿಕೊಳ್ಳುವುದು. ಸೊಬಗು ಮಾರಾಟದ, ಪ್ರದರ್ಶನದ ವಸ್ತುವಲ್ಲ. ಗಳಿಕೆಯ ಮೂಲವೂ ಅಲ್ಲ. ಹೆಣ್ಣು ಗಂಡಿಗೆ, ಗಂಡು ಹೆಣ್ಣಿಗೆ ಸೆಳೆಯಲ್ಪಡುವುದು ಪರಸ್ಪರ ಹಿತವಲ್ಲದೆ ಬೇರೆಯಲ್ಲ. ಆದ್ದರಿಂದ ಅಮೂರ್ತ ಅನುಭವವಾದ ಸೌಂದರ್ಯವನ್ನು ಸ್ಪರ್ಧೆಗೆ ಒಡ್ಡುವುದು ಎಷ್ಟು ಸರಿ?

—ಎಂ. ಆರ್. ಹಫೀಜ್

ಜಾಗೃತಿ ಉಂಟು ಮಾಡಿ

ಈಗ ಜನಪ್ರಿಯವಾಗಿರುವ ಮಹಿಳೆಯರ ಸೌಂದರ್ಯ ಸ್ಪರ್ಧೆ ಮಾನವೀಯ ದೃಷ್ಟಿಯಿಂದ ಹೇಯವಾದುದೇ ಸರಿ. ಈ ಸ್ಪರ್ಧೆಗಳಲ್ಲಿ ಮನುಷ್ಯನ ವಿಶಿಷ್ಟಗುಣಗಳಾದ ಮಾನಸಿಕ, ಬೌದ್ಧಿಕ ಹಾಗೂ ಕೌಶಲಿಕ ಸಾಮರ್ಥ್ಯಗಳ ಮಾಪನವಾಗುವುದಿಲ್ಲ. ಇಲ್ಲಿ ನಡೆಯುವುದು ಕೇವಲ ಸ್ತ್ರೀಯರ ದೇಹ ಪ್ರದರ್ಶನ. ಸಮತೋಲನಕ್ಕೆ ಪ್ರಾಶಸ್ತ್ಯವಿದೆಯೆಂದರೂ ಇದು ಕೇವಲ ಕೃತಕವಾದ ನಟನೆಯೇ ಹೊರತು ಅಂತರಂಗದ ಅಭಿವ್ಯಕ್ತಿಯೇನಲ್ಲ. ಹೀಗಾಗಿ ಇದು ತಾತ್ವಿಕವಾಗಿ 'ನಾಯಿಗಳ ಪ್ರದರ್ಶನ'–ಇತ್ಯಾದಿಗಳಿಗಿಂತ ಹೆಚ್ಚು ಮಹತ್ವದ್ದಾಗಲಾರದು. ಆದರೂ ವಿವೇಚನೆಯಿಲ್ಲದೆ ಕೆಲವರು ವೈಯಕ್ತಿಕವಾಗಿ ತಮಗೆ ದೊರೆಯುವ ಹಣ, ಪ್ರವಾಸ ಹಾಗೂ ಪ್ರಚಾರ ಲಾಭಕ್ಕಾಗಿ ಇಂತಹ ಸ್ಪರ್ಧೆಗಳಲ್ಲಿ ತಮ್ಮನ್ನು ಹೀನವಾಗಿ ಪ್ರದರ್ಶಿಸಿಕೊಂಡು ಅಲಂಕಾರ ವಸ್ತುಗಳ ಮಟ್ಟಕ್ಕೆ ಇಳಿದಿದ್ದಾರೆ. ಇದು ಮಹಿಳೆಯ ಸ್ಥಾನಮಾನಕ್ಕೆ ಕುಂದಾಗಿರುವುದರಿಂದ ಶಿಕ್ಷಿತ ಮಹಿಳೆಯರು ಒಂದುಗೂಡಿ ಈ ವಿಷಯದಲ್ಲಿ ಜಾಗೃತಿಯನ್ನುಂಟುಮಾಡಲು ಅಣಿಯಾಗಬೇಕು. ಸೌಂದರ್ಯವು ಕಲಾಕಾರರ ಮಾಧ್ಯಮದಿಂದ ಅಭಿವ್ಯಕ್ತಿಯಾಗುವ ವಸ್ತುವೇ ಹೊರತು, ಜೀವಂತರಾದ ಮಹಿಳೆಯ ಅಂಗಾಂಗ ಪ್ರದರ್ಶನ ಹಾಗೂ ಅವುಗಳ ಅಳತೆಯಿಂದ ಉಂಟಾಗುವಂತಹದಲ್ಲವೆಂಬುದನ್ನು ಮನಗಾಣಿಸಲು ಶ್ರಮಿಸಬೇಕು. ಮಹಿಳೆಯರ ಘನತೆ ಹೆಚ್ಚಾಗುವ ಹಾಗೆ ವರ್ತಿಸಲು ಪ್ರೇರೇಪಿಸಬೇಕು.

—ಡಿ. ಆರ್. ರಾಮರಾವ್

ಬೇರೆ ದಾರಿ ಸಿಗಲಿಲ್ಲವೆ?

ಯಾವುದೇ ಒಂದು ಕಲಾಮಾಧ್ಯಮ ಒಂದಲ್ಲ ಒಂದು ರೀತಿಯಿಂದ ಪ್ರೇಕ್ಷಕರನ್ನು ತಮ್ಮ ವಿಚಾರಗಳಿಂದ ಸ್ಪಂದಿಸುವಂತಾಗಬೇಕು. ಆ ರೀತಿಯ ಮಾಧ್ಯಮಗಳಲ್ಲಿ ನಾಟಕ, ನೃತ್ಯ, ಚಿತ್ರಕಲೆ ಮುಂತಾದವುಗಳು ಪ್ರಮುಖ ವಾದವು. ಇವುಗಳ ಜತೆಯಲ್ಲಿ ಹಲವಾರು ಪ್ರದರ್ಶನ ಗಳೂ ಕಲೆಯ ಹೆಸರಿನಲ್ಲಿ ಸೇರಿಕೊಂಡಿವೆ. ಇಂಥವು ಗಳಲ್ಲಿ ಜನ ಸಮೂಹವನ್ನು ಪ್ರಚೋದಿಸಿ ಇತ್ತೀಚಿಗೆ ಹೆಚ್ಚಿನ ಪ್ರಚಾರ ಪಡೆದುಕೊಂಡಿರುವುದು ಸೌಂದರ್ಯ ಸ್ಪರ್ಧೆ.

ಈ ಸ್ಪರ್ಧೆ ಅಥವಾ ಮಹಿಳೆಯರ ಸೌಂದರ್ಯ ಪ್ರದರ್ಶನ ಪ್ರೇಕ್ಷಕರನ್ನು ಯೋಚನೆಗೆ ಹಚ್ಚುವಂತಹ ಏನನ್ನೂ ತಿಳಿಸದೆ ಹೋದರೂ ಸೌಂದರ್ಯ ಅನ್ನುವ ಪದದ ಅರ್ಥವನ್ನು ಕೇವಲ ದೈಹಿಕ ಮಟ್ಟಕ್ಕೆ ಇಳಿಸಿ ಜನಸಮೂಹದಲ್ಲಿ ಸೌಂದರ್ಯ ಎಂಬ ಪದದ ಅರ್ಥಕ್ಕೆ ಲಕ್ಷ್ಮಣ ರೇಖೆ ಎಳೆಸಿದೆ. ಈ ವಿಷಯಕ್ಕೆ ಬಂದಾಗ ಕೇವಲ ಮಡಿವಂತರಂತೆ ಯೋಚಿಸುವುದಲ್ಲದೆ, ತಾತ್ವಿಕ ವಾಗಿ ವಿಚಾರ ಮಾಡಿದಾಗ ಇಂತಹ ಸೌ.ಸ್ಪ. ಗಳನ್ನು ಪ್ರೋತ್ಸಾಹಿಸುವಂತಹ ಮಹಿಳಾಕಾಲೇಜುಗಳಾಗಲಿ, ಸಂಘಸಂಸ್ಥೆಗಳಾಗಲೀ ವ್ಯಕ್ತಿಯ ಬೌದ್ಧಿಕ ವಿಕಾಸ ಕ್ಕಿಂತ, ವ್ಯಕ್ತಿಯ ವ್ಯಕ್ತಿತ್ವವನ್ನು ಕೇವಲ ದೈಹಿಕ ಪ್ರದರ್ಶನಕ್ಕೆ ಸೀಮಿತವಾಗಿಸಿವೆ.

ನಗರದಲ್ಲಿ ಮಹಿಳೆಯರಿಗಾಗಿ, ಮಹಿಳೆಯ ಶ್ರೇಯೋಭಿವೃದ್ಧಿಗಾಗಿ ಇರುವಂತಹ ಶಾಶ್ವತೀ ನಾವು ಕಂಡಂತೆ ಮಹಿಳೆಯರ ಬೌದ್ಧಿಕ ಬೆಳವಣಿಗೆಗೆ ಸಹಕಾರ ನೀಡುತ್ತಾ ಅದಕ್ಕಾಗಿ ದುಡಿಯುತ್ತ ಬಂದಿದೆ. ಶಾಶ್ವತೀ ಆಶ್ರಯದಲ್ಲಿ ನಡೆಯುವ ಸಾಹಿತ್ಯಿಕ ಚಟುವಟಿಕೆಗಳು, ಕಲಾ ಚಟು ವಟಿಕೆಗಳು ಮತ್ತು ಅದರ ಒಂದು ಅಂಗವಾದ ಸುಪ್ರಸಿದ್ಧ ಮ್ಯೂಸಿಯಂ ಉದಾಹರಣೆ. ಆದರೆ ಈ ಶಾಶ್ವತೀ ಸಂಸ್ಥೆ ಇತ್ತೀಚಿಗೆ ಹಣ ಕೂಡುವಿಕೆಗಾಗಿ ಸೌಂದರ್ಯ ಸ್ಪರ್ಧೆಯನ್ನು ಏರ್ಪಡಿಸಿದ್ದು ಆಶ್ಚರ್ಯದ ಸಂಗತಿ. ಶಾಶ್ವತಿಗೆ ಹಣ ಕೂಡಿಸಲು ಸೌಂದರ್ಯ ಸ್ಪರ್ಧೆ ಬಿಟ್ಟು ಬೇರೆ ಯಾವ ದಾರಿಯೂ ಸಿಕ್ಕಲಿಲ್ಲವೇ ಎಂಬ ಯೋಚನೆಗೆ ನಮ್ಮನ್ನು ಒಡ್ಡುತ್ತದೆ. ಅಥವಾ ಮಹಿಳೆಯರ ಉದ್ಧಾರ ಸೌಂದರ್ಯ ಪ್ರದರ್ಶನ ಗಳಿಂದಲೂ ಸಾಧ್ಯ ಎಂದು ನಂಬಿದೆಯೇ ?

—ಜಯಶ್ರೀ, ಸವಿತಾ

ಪ್ರಾಚೀನ ಕಾಲದಲ್ಲಿ ಸ್ತ್ರೀಮಾಂತ್ರಿಕರು........

(8ನೇ ಪುಟದಿಂದ)

ಪರಿವರ್ತನೆಯಾದ ನಂತರ ಬೇಸಾಯವು ಪುರುಷ ಪ್ರಧಾನ ವೃತ್ತಿಯಾಯಿತು; ಹೊಲಗಳು ಪುರುಷರ ಸೊತ್ತಾದವು. ಇದರಿಂದಾಗಿ ಇಂಥ ಮಾತೃ ಪ್ರಧಾನ ಸಮಾಜಗಳು ಕ್ರಮೇಣ ಪಿತೃಪ್ರಧಾನ ಸಮಾಜಗಳಾಗಿ ಪರಿವರ್ತನೆ ಹೊಂದಿದವು.

ಈ ಬದಲಾವಣೆ ಧಾರ್ಮಿಕ ರಂಗದಲ್ಲೂ ಪ್ರತಿಬಿಂಬಿತ ವಾಯಿತು. ಮಾತೃದೇವತೆಗಳ ಮಹತ್ವ ಕುಗ್ಗಿತು. ಸ್ತ್ರೀ ಪುರೋಹಿತರ ಸ್ಥಾನ ಕುಗ್ಗಿತು. ಕ್ರಮೇಣ ಎಲ್ಲ ಕಡೆಗಳಲ್ಲೂ ಪುರುಷರೇ ಸಮಾಜದ ಪುರೋಹಿತರೂ ಧರ್ಮಗುರುಗಳೂ ಆದರು. ಹಾಗಿದ್ದರೂ ಸ್ತ್ರೀ ಪೌರೋಹಿತ್ಯ ಪದ್ಧತಿ ಯಾವ ಕುರುಹೂ ಇಲ್ಲದೆ ಮಾಯವಾಗಲಿಲ್ಲ. ಮೊದಮೊದಲು ಪುರುಷರು ಪುರೋಹಿತರಾಗುವುದಕ್ಕೆ ಮುನ್ನ ತಮ್ಮ ಪುರುಷತ್ವ ವನ್ನು ಕಳೆದುಕೊಂಡು ನಪುಂಸಕರಾಗಬೇಕೆಂಬ ನಿಯಮ ವಿತ್ತು. ಫ್ರಿಜಿಯಾದಲ್ಲಿ ಸಿಬೇಲಿ ದೇವಿಯ ಪುರೋಹಿ ತರು ಇತಿಹಾಸ ಕಾಲದ ಸ್ವಲ್ಪಾವಧಿಯವರೆಗೆ ಕೂಡ ಇಂಥ ನಪುಂಸಕರಾಗಿದ್ದರು. ಮೆಸೊಪೊಟಾಮಿಯದಲ್ಲೂ ಆರಂಭದಲ್ಲಿ ಪುರುಷ ಪುರೋಹಿತರು ಕಷ್ಟ ಪಟ್ಟು ದೇಹ ದಂಡನೆ ಮಾಡಿ ನಪುಂಸಕತ್ವವನ್ನು ಪಡೆಯುತ್ತಿದ್ದರು. ಅನಂತರ ಪುರುಷತ್ವವನ್ನು ಕಳೆದುಕೊಳ್ಳಲು ಇದಕ್ಕಿಂತ ಸುಲಭವಾದ ಸಾಂಕೇತಿಕ ಉಪಾಯವನ್ನು ಕಂಡು ಹಿಡಿಯಲಾಯಿತು. ಅದೇ ಸ್ತ್ರೀ ವೇಷ ಧಾರಣೆ! ಬೆಂಗಳೂರಿನಲ್ಲಿ ಇಂದಿಗೂ ನಮ್ಮ ಕಣ್ಣ ಮುಂದೆಯೇ ಕಾಣಬರುವ 'ಕರಗ ಉತ್ಸವ' ಒಂದು ಜೀವಂತ ದೃಷ್ಟಾಂತ. ●

'ಕೆಂಬಾವುಟ' ದಿಂದ ಸಂಗ್ರಹ

ವ್ಯಕ್ತಿವಿಶೇಷ...

ಮಾನವತಾವಾದಿ ಸಾರಾ

"ಯುರೋಪ್ಯರು ಬೇರೆ ದೇಶಗಳಿಗೆ ಅವಸರದ ಭೇಟಿ ನೀಡಿ ಅಲ್ಲಿನ ಸಂಸ್ಕೃತಿಯ ಬಗ್ಗೆ, ಜನರ ಬಗ್ಗೆ ತಮಗೆ ಮನಬಂದಂತೆ ಹೇಳಿಕೆ ಕೊಡುತ್ತಾರೆ; ತೀರ್ಪು ನೀಡುತ್ತಾರೆ. ಒಂದು ಸಂಸ್ಕೃತಿಯ ಜನ ಮತ್ತೊಂದು ಸಂಸ್ಕೃತಿಯನ್ನು ಪೂರ್ಣ ಅರ್ಥಮಾಡಿಕೊಳ್ಳದೆ ಆ ಜನರ ಬಗ್ಗೆ ಟೀಕಿಸುವುದು ದಾರಿ ತಪ್ಪಿಸುವ ಕ್ರಿಯೆ ಅಷ್ಟೇ ಅಲ್ಲದೆ, ಉದ್ಧಟತನದಿಂದ ಕೂಡಿರುವಂತಹದೂ ಕೂಡ," ಎನ್ನುವ ಶ್ರೀಮತಿ ಸಾರಾ ಹಬ್ಸನ್‌ರವರ ಈ ವಿಶ್ಲೇಷಣೆ ಪ್ರಮುಖವಾಗಿ ತಮ್ಮನ್ನು ಕುರಿತದ್ದೇ ಎಂದರೆ ಯಾರಿಗೂ ಆಶ್ಚರ್ಯವಾಗಬಹುದು. ಸಾರಾ ತಮ್ಮ ಇರಾನಿನ ಭೇಟಿಯನ್ನು ಕುರಿತಂತೆ ಬರೆದ ಪುಸ್ತಕ 'Through Persia in Disguise' ಎಂಬ ಹೆಸರಿನಲ್ಲಿ 1973ರಲ್ಲಿ ಬ್ರಿಟನ್ನಿನಲ್ಲಿ ಮುದ್ರಣಗೊಂಡಿತು. ಇರಾನಿನ 'ಕ್ರಾಂತಿ'ಯ ನಂತರ ಅದಕ್ಕೆ ಬೇಡಿಕೆ ಇನ್ನೂ ಹೆಚ್ಚಾಗಿ 1979ರಲ್ಲಿ ಅಮೆರಿಕಾದಲ್ಲಿ ಎರಡು ಮುದ್ರಣಗಳನ್ನು ಕಂಡಿದೆ. ಆದರೆ ಈ ಕೃತಿಯ ಬಗ್ಗೆ ಅವರಿಗೆ ಸಮಾಧಾನವಿಲ್ಲ. "ಅದು ಒಂದು ರೀತಿಯ ವಸಾಹತುಶಾಹಿ ಸಂಸ್ಕೃತಿಯ ವಿಕ್ಟೋರಿಯನ್ ಶೈಲಿಯ ಸಾಹಸಮಯ ಕಥೆಯಿದ್ದಂತೆ ಅನಿಸುತ್ತದೆ. ಆದ್ದರಿಂದ ಆ ಸಂಸ್ಕೃತಿಯ ಒಳಗಿದ್ದು ಅದನ್ನು ಅನುಭವಿಸದೆ ಬರೆದಂತಿದೆ."– ಎನ್ನುವುದು ಅವರ ಅಭಿಪ್ರಾಯ.

ಬ್ರಿಟನ್ನಿನ ಪ್ರಸಿದ್ಧ ಟೆಲಿವಿಷನ್ ಚಿತ್ರ ನಿರ್ಮಾಪಕಿ, ಸಾರಾ ಹಬ್ಸನ್ ಹುಟ್ಟು ಲೇಖಕಿಯಲ್ಲ. ಲೇಖಕಿಯಾಗಬೇಕೆಂದು ಹೊರಟವರಲ್ಲ. ಮೇಲ್‌ಮಧ್ಯಮ ವರ್ಗದ ಕುಟುಂಬದಲ್ಲಿ ಹುಟ್ಟಿರುವ ಸಾರಾ ಪ್ರತಿಷ್ಠಿತ ವಿದ್ಯಾಭ್ಯಾಸ ಪಡೆದರಾದರೂ ಬಯಸಿದಂತಹ ವಿದ್ಯಾಭ್ಯಾಸ ಪಡೆಯಲಾಗಲಿಲ್ಲ. ತಂದೆ ಕನ್ಸರ್ವೇಟಿವ್ ಪಕ್ಷದ ಎಂ. ಪಿ. ಹಾಗೂ ಆ ಪಕ್ಷದ ಸರ್ಕಾರದ ಅಟಾರ್ನಿ ಜನರಲ್ ಆಗಿದ್ದವರು ಮತ್ತು ಶಾಯಿ ಸ್ಕಾಟ್ಲೆಂಡಿನ ಶ್ರೀಮಂತ ವರ್ತಕರು. ಅವಳಿಗೆ ಈ ಪರಿಸರ ಒಗ್ಗಲಿಲ್ಲ.

● ಲಕ್ಷ್ಮಿ ಚಂದ್ರಶೇಖರ್

ಹುಡುಗಿಯರನ್ನು ಬೆಡಗಿನ, ನಾಜೂಕಿನ ಮಹಿಳೆಯರನ್ನಾಗಿ ಸಿದ್ಧಪಡಿಸುವ ಆ ಶಾಲೆಯ ಪಠ್ಯಕ್ರಮವನ್ನು ದ್ವೇಷಿಸಿದಳು. 'Society Lady'ಯ ಸಂಸ್ಕೃತಿಯನ್ನು ತಿರಸ್ಕರಿಸಿದಳು. ಇವೆಲ್ಲದರ ಆಚೆ ಬಂದು ಜೋರ್ಡಾನಿನಲ್ಲಿ ಶಿಕ್ಷಕಿಯಾಗಿ ಸೇರಿಕೊಂಡಳು.

ಸಾರಾಳನ್ನು ಲೇಖಕಿಯಾಗಿ ರೂಪಿಸಿದ್ದು ಅವರ ಇರಾನ್ ಪ್ರವಾಸ. ಇಸ್ಲಾಂನ ಬಗ್ಗೆ ಹೆಚ್ಚು ತಿಳಿಯುವ ಆಸಕ್ತಿ ಹಾಗೂ ತನ್ನ ಸಾಮರ್ಥ್ಯವನ್ನು ಪರೀಕ್ಷಿಸಿಕೊಳ್ಳುವ ಮತ್ತು ಶೋಧಿಸಿಕೊಳ್ಳುವ ಪ್ರಯತ್ನದ ಪರಿಣಾಮವಾಗಿ ಇರಾನ್‌ಗೆ ಭೇಟಿ. ಮುಸ್ಲಿಂ ರಾಷ್ಟ್ರದಲ್ಲಿ ವಿದೇಶೀ ಹೆಣ್ಣೊಬ್ಬಳು ಅಂದು ಒಂಟಿಯಾಗಿ ಅಲೆ

ದಾಡಿದರೆ ಆಗಬಹುದಾದ ಅನಾಹುತದ ಬಗ್ಗೆ ಅರಿವಿದ್ದ ಸಾರಾ ಗಂಡು ವೇಷ ಧರಿಸಿ ಅಲೆದಾಡಿದಳು. ಆ ಪ್ರಯಾಣದ ಸಮಯದಲ್ಲಿ ಅವಳು ವಿಸ್ತಾರವಾಗಿ ಬರೆದುಕೊಳ್ಳುತ್ತಿದ್ದ ಟಿಪ್ಪಣಿಗಳನ್ನು ಪುಸ್ತಕ ರೂಪದಲ್ಲಿ ಬರೆಯಲು ಸಾಧ್ಯ ಎನಿಸಿತು. ಬರೆದು ಅದನ್ನು ಪ್ರಕಾಶಕರಲ್ಲಿಗೊಯ್ದಾಗ ಅವರು ಅದನ್ನು ಕೂಡಲೇ ಮುದ್ರಿಸಲು ಒಪ್ಪಿದರು. ಸಾರಾ ಲೇಖಕಿಯಾದದ್ದು ಹೀಗೆ. ಇಂದಿನ ಲೇಖಕಿ ಸಾರಾಗೂ ಅಂದಿನ ಲೇಖಕಿಗೂ ಬಹಳ ವ್ಯತ್ಯಾಸವಿದೆ. ಆ ಪುಸ್ತಕವನ್ನು ವಿಮರ್ಶಾತ್ಮಕವಾಗಿ ಟೀಕಿಸುತ್ತಾರಾದರೂ "ಆ ಪುಸ್ತಕದಿಂದ ಅತ್ಯಂತ ದೊಡ್ಡ ಸಾಧನೆ ಎಂದರೆ, ನಾನೂ ಬರೆಯಬೇಕು, ಎಂದೆನಿಸಿದ್ದು" ಎನ್ನುತ್ತಾರೆ.

ಹತ್ತು ವರ್ಷಗಳ ಹಿಂದೆ ಸಾರಾ ಹಬ್ಸನ್‌ರೊಡನೆ ಬ್ರಿಟನ್ನಿನಲ್ಲಿ ಕೆಲಸ ಮಾಡಿದ್ದ ನಾನು ಅವರ ಸ್ನೇಹಮಯ ವ್ಯಕ್ತಿತ್ವ, ಔದಾರ್ಯ, ಉದಾತ್ತ ವಿಚಾರಗಳಿಂದ ಆಕರ್ಷಿತಳಾಗಿದ್ದೆ. ಅವರ ಜೀವನದ ಯಶಸ್ವೀ ಘಟನೆಗಳಿಗೆ ಬಹುಶಃ ಅವರ ಈ ಗುಣಗಳೇ ಕಾರಣವಿರಬೇಕು. ಇತ್ತೀಚೆಗೆ ಮುಂಬಯಿಗೆ ಬಂದಿದ್ದ ಅವರನ್ನು ಭೇಟಿ ಮಾಡಿ, 'ಪ್ರಿಯಸಂಗಾತಿ'ಗಾಗಿ ಸಂದರ್ಶಿಸಿದಾಗ ಅವರು ವ್ಯಕ್ತಪಡಿಸಿದ ಬಹಳಷ್ಟು ವಿಚಾರಗಳು ಅವರ ಬೆಳವಣಿಗೆಯ ಮುಖವನ್ನು ಪರಿಚಯಿಸಿತು. ಇರಾನಿನ 'ಕ್ರಾಂತಿ'ಯ ಸಮಯದಲ್ಲಿ ಆ ದೇಶದ ಬಗ್ಗೆ ಒಂದು ಟೆಲಿವಿಷನ್‌ ಧಾರಾವಾಹಿ ಚಿತ್ರ ಮಾಡಲು ಸಾರಾ ಮತ್ತೆ ಎಪ್ಪತ್ತರ ದಶಕದಲ್ಲಿ ಅಲ್ಲಿಗೆ ಹೋದರು. ಆಗ ಅಲ್ಲಿನ ಮಹಿಳೆಯರ ಸ್ಥಿತಿಗಳನ್ನು ಕುರಿತು ಅಭ್ಯಸಿಸಲು ಸಾಧ್ಯವಾಯಿತು. ಅಲ್ಲಿನ ಮಹಿಳೆಯರನ್ನು ಕುರಿತಂತೆ ವಿಚಾರಿಸಿದಾಗ ಅವರು ಹೇಳಿದ್ದು :

"ಪ್ರಪಂಚದ ಎಲ್ಲ ಮಹಿಳೆಯರಿಗಿಂತ ಹೆಚ್ಚು ಗಮನ ಸೆಳೆದಿರುವುದು ಮತ್ತು ಪಾಶ್ಚಾತ್ಯರಲ್ಲಿ ಕೋಪ ಮೂಡಿಸಿರುವುದು ಮುಸ್ಲಿಂ ಮಹಿಳೆಯರ ಪರಿಸ್ಥಿತಿ. ನನ್ನ ಮೊದಲ ಪ್ರಯಾಣದಲ್ಲಿ ಹುಡುಗನಾಗಿ ಹೋಗಿದ್ದರಿಂದ ಅಲ್ಲಿನ ಹೆಣ್ಣಿನ ಬಗ್ಗೆ ಅವರ ದೃಷ್ಟಿಯೇನು ಎನ್ನುವುದು ಚೆನ್ನಾಗಿ ತಿಳಿಯಿತು. ಸಾಕಷ್ಟು Feiminist ಸಾಹಿತ್ಯ ಓದಿ ಐರೋಪ್ಯರಂತೆ ಯೋಚಿಸುತ್ತಿದ್ದ ನನಗೆ ಅವರ ದೃಷ್ಟಿಕೋನ ಸಿಟ್ಟು ಬರಿಸುತ್ತಿತ್ತು. ಆದರೆ ಈಗ ನನಗನ್ನಿಸುವುದು, ಇರಾನಿನ ಮಹಿಳೆಯರು ಇತರ ಮಹಿಳೆಯರಷ್ಟೇ ತುಳಿತಕ್ಕೆ ಗುರಿಯಾಗಿದ್ದಾರೆ. ಎಲ್ಲ ಧರ್ಮಗಳೂ ಹೆಣ್ಣಿಗೆ ಒಂದು ನಿರ್ದಿಷ್ಟ ಸ್ಥಾನ ಕೊಡುತ್ತವೆ. ಆದರೆ ಅವಳ ಸ್ಥಾನಮಾನಗಳಿಗೆ ಕಾರಣ ಅವಳ ಆರ್ಥಿಕ ಪರಿಸ್ಥಿತಿ ಮತ್ತು ಅವಳು ಹೆಣ್ಣಾಗಿದ್ದಾಳೆ, ಎಂಬುದು. ಇರಾನಿನಲ್ಲಾಗಲೀ, ಭಾರತ ಅಥವಾ ಬಿಟ್ರನ್ನಿನಲ್ಲಾಗಲೀ, ಹೆಣ್ಣು ಬಹುಪಾಲು ಮನೆಗೆಲಸವನ್ನು ಮಾಡುತ್ತಾಳೆ. ಮಕ್ಕಳನ್ನು ಹೊರುವ, ಹೆರುವ ಜವಾಬ್ದಾರಿಯು, ಅವರಿಗಿರುವ ಜವಾಬ್ದಾರಿಗಳಲ್ಲಿ, ಅವರು ತೆಗೆದುಕೊಳ್ಳುವ ನಿರ್ಧಾರಗಳಲ್ಲಿ ಅತಿ ಮುಖ್ಯ ಪಾತ್ರ ವಹಿಸುತ್ತದೆ."



ಸಾರಾ ಬರೆದ ಎರಡನೆಯ ಪುಸ್ತಕ, 'The Family Web (1978) ಕರ್ನಾಟಕದ ಒಂದು ಹಳ್ಳಿಯ ರೈತ ಕುಟುಂಬವನ್ನು ಕುರಿತದ್ದು. ಅತಿ ಬಡವರಲ್ಲದಿದ್ದರೂ ಸಾಕಷ್ಟು ಸಾಲ ಮಾಡಿದ್ದ ಈ ಸಂಸಾರದ ಹೆಂಗಸರೊಡನೆ ತಿಂದು, ಕೆಲಸ ಮಾಡಿ, ಅವರ ಜೀವನವನ್ನು ಅರ್ಥ ಮಾಡಿಕೊಳ್ಳುವ ಪ್ರಯತ್ನ ಮಾಡಿದರು. ಭಾಷಾಂತರದಿಂದ ತೃಪ್ತರಾಗದ ಸಾರಾ ಇಡೀ ಮಾತುಕತೆಯನ್ನು ಧ್ವನಿ ಮುದ್ರಿಸಿ, ಮತ್ತೆ ಅದರ ಪ್ರತಿಶಬ್ದವನ್ನೂ ಅನುವಾದಿಸಿ ಕೇಳಿ, ಚರ್ಚಿಸಿ– ಎಲ್ಲಾ ಸೂಕ್ಷ್ಮಾರ್ಥಗಳನ್ನು ಗ್ರಹಿಸುವ ಪ್ರಯತ್ನ ಮಾಡುತ್ತಾರೆ. ಈ ರೀತಿಯ ಕೆಲಸ ದುಬಾರಿ ಮತ್ತು ನಿಧಾನ. ಆದರೂ ಇದರಿಂದ ಮಾತ್ರ ಆ ಹಳ್ಳಿಗರ ಅನುಭವಗಳಿಗೆ ಪ್ರಾಮಾಣಿಕವಾಗಿರಲು ಸಾಧ್ಯ, ಎನ್ನುವುದು ಅವರ

ಅಭಿಪ್ರಾಯ. "ಈ ಪುಸ್ತಕದಿಂದ ನನ್ನ ಬರಹ ಹೇಗಿರಬೇಕು, ಎಂಬುದರ ಸ್ಪಷ್ಟ ತಿಳಿವು ನನಗುಂಟಾಯಿತು. ನನಗೆ ಬೇಕಾದ ಜನರ ಬಗ್ಗೆ ಅಕೆಡಮಿಕ್ ಆದ, ಮತ್ತು ಸಮಾಜಶಾಸ್ತ್ರೀಯ ಅಧ್ಯಯನಕ್ಕಿಂತ, ಒಂದು ರೀತಿಯ ಆತ್ಮೀಯವಾದ, ಮಾನವೀಯ ಹಂತದಲ್ಲಿ ಅಧ್ಯಯನ ನಡೆಯಬೇಕು ಎಂದೆನಿಸಿತು. ಈಚೆಗೆ ಇದರ ಬಗ್ಗೆ ಹೆಚ್ಚು ರಾಜಕೀಯವಾಗಿಯೂ ಯೋಚಿಸುವಂತೆ ಮಾಡಿದೆ. ಗ್ರಾಮೀಣ ಬಡವರ, ಅದರಲ್ಲೂ ಮಹಿಳೆಯರ ದನಿಯನ್ನು ಯಾರೂ ಕೇಳುವುದೇ ಇಲ್ಲ. ಅವರ ಅಭಿಪ್ರಾಯಗಳನ್ನು ಯಾರೂ ಗೌರವಿಸುವುದಿಲ್ಲ. ಅನ್ಪರೂ ಹಾಗೂ ನಿರಕ್ಷರರೂ ಆದ ಅವರು ತಮ್ಮ ಬೇಕು, ಬೇಡಗಳ ಬಗ್ಗೆ ವಿವೇಕಯುತವಾದ ತೀರ್ಮಾನ ತೆಗೆದುಕೊಳ್ಳಲಾರರು- ಎಂಬುದು ಸಾಧಾರಣವಾದ ಅಭಿಪ್ರಾಯ. ಆದರೆ ನನ್ನ ಅಭಿಪ್ರಾಯ ಇದಕ್ಕೆ ವಿರುದ್ಧವಾದ್ದು. ಅವರು ತೆಗೆದುಕೊಳ್ಳುವ ತೀರ್ಮಾನಗಳು ಅವರ ಸೀಮಿತ ಅನುಭವಗಳಿಗೆ ನಿಷ್ಠವಾಗಿದ್ದರೂ, ಅದು ಅವರ ಪರಿಸರದಲ್ಲಿ ಸಂಪೂರ್ಣ ಅರ್ಥಪೂರ್ಣವಾಗಿರುತ್ತದೆ. ಅವರ ಪರಿಸ್ಥಿತಿಯನ್ನು, ದೃಷ್ಟಿಕೋನವನ್ನು ಅರ್ಥ ಮಾಡಿಕೊಳ್ಳದೆ ಅವರಿಗಾಗಿ ಮಾಡುವ ಎಲ್ಲಾ ಕಾನೂನುಗಳು, ಅಭಿವೃದ್ಧಿ ಯೋಜನೆಗಳು ಅರ್ಥಹೀನ ಎನ್ನುವುದೇ ನನ್ನ ಅಭಿಪ್ರಾಯ."

ಸಾರಾ ಇತ್ತೀಚೆಗೆ ಪಶ್ಚಿಮ ಆಫ್ರಿಕಾದ ಗ್ಯಾಂಬಿಯಾದಲ್ಲಿ ಮಹಿಳಾ ಅಕ್ಕಿ ಬೆಳೆಗಾರರ ಕತೆಯನ್ನು ಆಧರಿಸಿ ಚಿತ್ರಿಸಿದ್ದು ಈ ರೀತಿಯಲ್ಲಿಯೇ. ಒಂದು ಅಂತರರಾಷ್ಟ್ರೀಯ ಸಂಸ್ಥೆಯ ನೆರವಿನಿಂದ ಹಾಕಿರುವ ಅಭಿವೃದ್ಧಿ ಯೋಜನೆಯಿಂದಾಗಿ, ಅಲ್ಲಿನ ಮಹಿಳೆಯರು ಪರಂಪರಾಗತವಾಗಿ ಬಂದಿದ್ದ ಭೂಮಿಯ ಹಕ್ಕನ್ನು ಕಳೆದುಕೊಳ್ಳುವ ಸ್ಥಿತಿ ಬಂದಿತ್ತು. ಅಭಿವೃದ್ಧಿಯೋಜನೆಗಳಿಂದ ಭೂಮಿ ಲಾಭದಾಯಕವಾದ ಕೂಡಲೇ ಗಂಡಸರು ಅದನ್ನು ಕಸಿದುಕೊಳ್ಳುವುದು ಅವರ ಅನುಭವವಾಗಿತ್ತು. ಆದರೆ ಸಾರಾ ಅವರೊಂದಿಗೆ ನಿರ್ಮಿಸಿದ ಸಾಕ್ಷ್ಯಚಿತ್ರ ಹಾಗೂ ಬರೆದ ಲೇಖನಗಳಿಂದ ಎದ್ದ ಗುಲ್ಲಿನಿಂದಾಗಿ ಅವರಿಗೆ ಭೂಮಿ ಹಿಂತಿರುಗಿ ಪಡೆಯಲು ಸಾಧ್ಯವಾಯಿತು. ಈ ಹೆಂಗಸರಿಗೆ ಭೂ ಹಂಚಿಕೆ ಮಂಡಳಿಯಲ್ಲಿ ಸದಸ್ಯತ್ವ ಸಹ ಸಿಕ್ಕಿತು. ಅದನ್ನು ಈಗ ಪುಸ್ತಕ ರೂಪದಲ್ಲಿ ಬರೆಯಲಿದ್ದಾರೆ. "ಆ ಹೆಂಗಸರಿಗೆ ಈ ಪುಸ್ತಕದಲ್ಲಿ ಸಮಾನ ಹಕ್ಕು, ಭಾಗ, ಹೆಸರು ಇರುತ್ತದೆ. ಅವರೊಂದು ಭಾಗ, ನಾನೊಂದು ಭಾಗ ಬರೆಯುತ್ತೇನೆ. ಅವರ ಭಾಗದಲ್ಲಿ ಅವರು ತಾವ್ಯಾರು, ತಮ್ಮ ಅನುಭವ, ದೃಷ್ಟಿಕೋನವೇನಗಳೇನು ಎಂಬುದನ್ನು ಬರೆಯುತ್ತಾರೆ. ನಾನು ಅವರ ಅನುಭವಕ್ಕೆ ಅಂತರರಾಷ್ಟ್ರೀಯ ದೃಷ್ಟಿಕೋನನ್ನು ಕೊಡುತ್ತೇನೆ. ಅಂತರರಾಷ್ಟ್ರೀಯ ನೆರವು ಸಂಸ್ಥೆಗಳ ಉದ್ದೇಶ, ಕಾರ್ಯವಿಧಾನ, ಇವುಗಳ ಬಗ್ಗೆ ಬರೆಯುತ್ತೇನೆ."– ಹೀಗಿದೆ ಸಾರಾನ ಕಾರ್ಯವಿಧಾನ.

ಸೆನೆಗಲ್‌ನ ಬತ್ತ ಬೆಳೆಯುವ ಮಹಿಳಾ ರೈತ ಫೆಡರೇಷನ್‌ನ ಸಹಕಾರದಲ್ಲಿ ಬ್ರಿಟನ್ನಿನ ಟೆಲಿವಿಷನ್ ಕಂಪೆನಿಯೊಂದಕ್ಕಾಗಿ ಒಂದು ಚಿತ್ರ ತೆಗೆಯುವುದು ಸಾರಾ ಹಾಕಿಕೊಂಡಿರುವ ಇನ್ನೊಂದು ಕಾರ್ಯವಿಧಾನದ ಬಗ್ಗೆ ಅವರೇ ವಿಶ್ಲೇಷಿಸಿಕೊಳ್ಳುತ್ತಾ, "ನಾನು ಮಾಡುವ ಎಲ್ಲ ಕೆಲಸಗಳೂ, ಗ್ಯಾಂಬಿಯಾದಲ್ಲಿ ಉಂಟುಮಾಡಿದಂತೆ ಹೆಂಗೆಳೆಯರ ಪರಿಸ್ಥಿತಿಯನ್ನು ಉತ್ತಮಗೊಳಿಸುತ್ತವೆ, ಎಂಬ ಭ್ರಮೆಯೇನೂ ನನಗಿಲ್ಲ. ಅವರ ಜೀವನವನ್ನು ಪ್ರವೇಶಿಸಿ ಅವರಿಗೆ ತೊಂದರೆಯುಂಟಾಗುವಂತಾಗಬಾರದು. ನನಗೂ ಇವರಿಂದ ಪ್ರಸಿದ್ಧಿ, ಹಣ ದೊರೆತಿದ್ದರೂ, ಅದರಲ್ಲಿ ಸ್ವಲ್ಪ ಭಾಗವಾದರೂ ತಮ್ಮ ಅನುಭವಗಳನ್ನು ನನ್ನೊಡನೆ ಹಂಚಿಕೊಂಡ ಆ ಜನರಿಗೆ ತಲುಪಬೇಕು ಎಂಬುದು ನನ್ನ ಇಷ್ಟ." ಸಾರಾ ತಮ್ಮ ಅಪರೂಪದ ವಿಚಾರಗಳಿಂದ ಭಿನ್ನ ವ್ಯಕ್ತಿಯೆನಿಸಿದರೂ ಆರೋಗ್ಯಕರ ಚಿಂತನೆಯಿಂದ ಬಹು ಮುಖ್ಯರಾಗುತ್ತಾರೆ. ○

"ದುಡಿಯುವ ಮಹಿಳೆ ಕಾನೂನು ಹಾಗೂ ಸಾಮಾಜಿಕ ನಿರ್ಬಂಧಗಳಿಂದಾಗಿ ಅತ್ಯಂತ ದಮನಕ್ಕೊಳಗಾಗಿದ್ದಾಳೆ. ದಬಾವಣೆಗೆ, ಬೆದರಿಕೆಗೆ ಮತ್ತು ಹಿಂಸೆಗೆ ಶತಶತಮಾನಗಳಿಂದ ಗುರಿಯಾಗಿರುವ ಅವಳ ವ್ಯಕ್ತಿತ್ವದ ಪೂರ್ಣವಿಕಾಸವಾಗಲು ಅವಳ ಸಮಸ್ಯೆಯ ಪರಿಹಾರಕ್ಕೆ ವಿಶಿಷ್ಟವಾದೊಂದು ದೃಷ್ಟಿಕೋನದ ಅವಶ್ಯಕತೆ ಇದೆ. ತನ್ನ ದುಡಿಮೆಯನ್ನು ಮಾರುವವಳಾಗಿ ಮಾತ್ರವೇ ಅವಳು ಶೋಷಣೆಗೆ ಗುರಿಯಾಗಿಲ್ಲ; ತಾಯಿಯಾಗಿ, ಮತ್ತು ಮಹಿಳೆಯಾಗಿ ಸಹ ಅವಳು ಶೋಷಿತಳೇ."

ಗಾರ್ಕಿಯ 'ತಾಯಿಯ' ಪ್ರತಿರೂಪಗಳು

ನವೆಂಬರ್ 7 ಈ ಶತಮಾನದಲ್ಲಿ ಅಭೂತಪೂರ್ವವಾದ ದಿನ. 1917 ರ ಆ ದಿನದಂದು ಒಂದು ಹೊಸ ವ್ಯವಸ್ಥೆ, ನಾಗರಿಕತೆ ಮತ್ತು ಸಂಸ್ಕೃತಿಯು ಅಸ್ತಿತ್ವಕ್ಕೆ ಬಂದು ಚರಿತ್ರೆಯ ಗತಿಗೆ ಭವ್ಯವಾದ ತಿರುವೊಂದು ದೊರಕಿತು. ಮಹಾನ್ ಅಕ್ಟೋಬರ್ ಸಮಾಜವಾದಿ ಕ್ರಾಂತಿಯು ಕೇವಲ ರಷ್ಯದ ಭವಿಷ್ಯವನ್ನು ರೂಪಿಸಲಿಲ್ಲ; ನೂತನವಾದೊಂದು ಸಮಾಜದ ರಚನೆಗೆ ಅದೊಂದು ಭದ್ರ ಬುನಾದಿಯಾಯಿತು. ಇಂದು ನಡೆಯುತ್ತಿರುವ ಅನೇಕ ಜಾಗತಿಕ ಚಳುವಳಿಗಳಿಗೆ ಅದೇ ಮೂಲ ಪ್ರೇರಣೆ ಮತ್ತು ಅಚಲವಾದ ಬೆಂಬಲ.

ಲೆನಿನ್ ಮತ್ತು ಬೋಲ್ಶೆವಿಕ್ ಪಕ್ಷದ ನೇತೃತ್ವದಲ್ಲಿ ಜರುಗಿದ ಅಂದಿನ ಕ್ರಾಂತಿಯು ಯಶಸ್ವಿಯಾಗುವುದರಲ್ಲಿ ರಷ್ಯದ ಮಹಿಳೆಯರ ಪಾತ್ರ ಅಗಾಧವಾಗಿದ್ದಿತು. ಅಸಂಖ್ಯ ಸ್ತ್ರೀಯರು ಅಗ್ಗಿ ತ್ಯಾಗ–ಬಲಿದಾನಗಳ ಮೂಲಕ ಸಮಾಜದ ಅವಿಚ್ಛಿನ್ನ ಭಾಗವಾಗಿ ಸೆಣಸಿದ್ದು ಸದಾ ಕಾಲಕ್ಕೂ ಅವಿಸ್ಮರಣೀಯ. ಶ್ರೀಮಂತ ಕುಟುಂಬವೊಂದರಲ್ಲಿ ಜನಿಸಿ ರಷ್ಯದ ರೈತ–ಕಾರ್ಮಿಕರ ಆಸೆ–ಆಕಾಂಕ್ಷೆಗಳನ್ನು ತನ್ನದಾಗಿಸಿಕೊಂಡು ಹಲವು ಆಂದೋಲನಗಳಲ್ಲಿ ಅಗ್ರಸ್ಥಾನದಲ್ಲಿದ್ದು, ಕೆಲವೆಮ್ಮೆ ಕಾರಾಗೃಹವಾಸವನ್ನನುಭವಿಸಿ, ದೇಶದಿಂದ ಉಚ್ಚಾಟಿತಳಾಗಿ, ನಂತರದ ಕಾಲದಲ್ಲಿ ಸಮಾಜವಾದಿ ರಷ್ಯಾದ ರಾಯಭಾರಿಯಾಗಿ ಸ್ವೀಡನ್ನಿನಲ್ಲಿ ಶ್ರೇಯಸ್ಸನ್ನು ಪಡೆದ ಅಲೆಕ್ಸಾಂಡ್ರಾ ಕೊಲಂತ್ರೈ ವಿಶ್ವದಲ್ಲೇ ಪ್ರಪ್ರಥಮ ಮಹಿಳಾ ರಾಯಭಾರಿ. ಲೆನಿನ್ನರೊಡನೆ ಎಲ್ಲ ಕ್ರಾಂತಿಕಾರಿ ಚಟುವಟಿಕೆಗಳಲ್ಲೂ ಪಾಲ್ಗೊಂಡು, ತ್ಸಾರ್‌ಶಾಹಿ ಪೋಲೀಸರ ಕಣ್ಣುತಪ್ಪಿಸಿ ಅನೇಕ ಗುಪ್ತ ಕಾರ್ಯಾಚರಣೆಗಳಲ್ಲಿ ತೊಡಗಿದ್ದ ಒಬ್ಬಾಕೆ ಕ್ರುಪ್ಸ್ಕಯ, ಲೆನಿನ್ನರ ಪತ್ನಿ. ಕ್ರಾಂತಿಯ ಮುನ್ನಾದಿನಗಳಲ್ಲಿ ಅನಕ್ಷರತೆಯ ಪಿಡುಗನ್ನು ನಿವಾರಿಸಲು ಅವಿರತವಾಗಿ ಶ್ರಮಿಸಿದ್ದ ಈಕೆ ಕ್ರಾಂತಿಯ ನಂತರ ಶಿಕ್ಷಣ ಮತ್ತು ಸಂಸ್ಕೃತಿಗಳನ್ನು ಜನಪರವಾಗಿ ಸುವ್ಯವಸ್ಥೆಗೊಳಿಸುವ ಜವಾಬ್ದಾರಿಯನ್ನು ಹೊತ್ತು ಸಮಾಜವಾದಿ ಜೀವನಕ್ಕೆ ಸುಭದ್ರವಾದ ಅಡಿಪಾಯವನ್ನು ರಚಿಸಿಕೊಟ್ಟವಳು. ರಷ್ಯದ ಗ್ರಾಮಾಂತರ ಪ್ರದೇಶದ ರೈತಾಪಿ ಜನರ ಸಂಕಷ್ಟಗಳನ್ನು ಆಮೂಲಾಗ್ರವಾಗಿ ಶೋಧಿಸಿ, ಅವರನ್ನು ಸಂಘಟಿಸಿ, ರೈತಹೋರಾಟಗಳಲ್ಲಿ ಬತ್ತದ ಚಿಲುಮೆಯಂತೆ ಕಂಗೊಳಿಸಿದವಳು ಮರಿಯಾ ಸ್ಪಿರಿದೋನವ, ಸಾಮಾಜಿಕ–ಕ್ರಾಂತಿಕಾರಿ ಪಕ್ಷದ ಅಗ್ರನಾಯಕಿ. ಇಂತಹ ಸಾವಿರಾರು ಮಹಿಳೆಯರು ಯಾವ ಪುರುಷನಿಗೂ ಕಡಿಮೆಯಿಲ್ಲದಂತೆ ತ್ಸಾರ್‌ಶಾಹಿಯ ಪತನಕ್ಕೆ ಕಾರಣರಾಗಿ ಆಣಿಯಾದರು, ಯೋಧರಾಗಿ ಕಾದಾಡಿದರು, ಮ್ಯಾಕ್ಸಿಂ ಗಾರ್ಕಿಯು ಸೃಷ್ಟಿಸಿದ "ತಾಯಿ"ಯ ಪ್ರತಿರೂಪಗಳಾದರು.

ತತ್ಯಾನಾ ಲ್ಯುದ್ವಿನ್ಸ್ಕಯಾ ಎಂಬಾಕೆ ಕ್ರಾಂತಿಯ ನಂತರದ ಅಂತರ್ಯುದ್ಧದಲ್ಲಿ ಒಮ್ಮೆ ಕೆಂಪುಸೈನಿಕರನ್ನು ರಕ್ಷಿಸಲು ಹಾಗೂ ಶತ್ರುವನ್ನು ಹಿಮ್ಮೆಟ್ಟಿಸಲು ಮುಂದಾದವಳು. ಶತ್ರುವಿನ ಕೈಸೆರೆಯಾದ ಅವಳನ್ನು ವಿಚಾರಣೆಗೆ ಗುರಿಪಡಿಸಿದ ಲೆಫ್ಟಿನೆಂಟ್ ಕರ್ನಲ್ ನಿಕೋಲಯೆವ್ ತಬ್ಬಿಬ್ಬಾದ. "ಈ ಹೆಂಗಸಿನೊಡನೆ ಹೋರಾಡುವುದು ಹೇಗೆ? ಅವಳನ್ನು ಜೈಲಿಗೆ ಕಳಿಸಲೆ?-ಈಗಾಗಲೆ ಹಲವು ಬಾರಿ ಅವಳು ಅಲ್ಲಿಗೆ ಹೋಗಿಬಂದಿದ್ದಾಳೆ. ಯಾವುದಾದರೂ ದೂರದ ಮೂಲೆಗೆ ಅವಳನ್ನು ಹೊರದೂಡಲೆ?–ಅದನ್ನೂ ಆಗಲೇ ಮಾಡಿಯಾಗಿದೆ, ಒಂದು ಬಾರಿಯಲ್ಲ, ಹಲವು ಬಾರಿ. ಅವಳನ್ನು ನ್ಯಾಯಾಂಗದ ಮೆಟ್ಟಿಲು ಹತ್ತುವಂತೆ ಮಾಡಲೆ?-ಅದೂ ಹಲವು ಬಾರಿ ಮಾಡಿಯಾಗಿದೆ." ಒಬ್ಬ ಕೃಶಳಾದ ಸಾಮಾನ್ಯ ಹೆಂಗಸಿನೆದುರು ಶತ್ರುಸೈನ್ಯದ ಅಧಿಕಾರಿ ಅಸಹಾಯಕನಾದ. ಇನ್ನೂ ಸರಿಯಾಗಿ ಹೇಳುವುದಾದರೆ, ಅವಳು ಯಾವುದರ ಪ್ರತೀಕವಾಗಿದ್ದಳೋ ಅದರೆದುರು ಅವನು ಕಂಗಾಲಾದ; ಇಡೀ ಮಾನವಜನಾಂಗದ ಕ್ರಾಂತಿಕಾರಿ ಬದಲಾವಣೆಯ ಅನಿವಾರ್ಯತೆಯ ಪ್ರತೀಕ ಅವಳಾಗಿದ್ದಳು. ಅವನಾದರೋ ಅಧಿಕಾರಶಾಹಿ ಮತ್ತು ಅಂಧತತ್ವದ ಅಪರಾವತಾರವಾಗಿದ್ದವನು. ಅವಳೆದುರು ಅವನು ಹಿಂತೆಗೆದ.

ಇದೇ ಮಹಿಳೆಯರು ಮತ್ತೆ 1941–45 ರ ನಾಜಿ ದುರಾಕ್ರಮಣದ ವಿರುದ್ಧ ವೀರಾವೇಶದಿಂದ ಹೋರಾಡಿದ್ದು ಹಿಟ್ಲರನ ಪತನದ 40 ನೇ ವಾರ್ಷಿಕೋತ್ಸವ ಸಂದರ್ಭದ ಈ ವರ್ಷದಲ್ಲಿ ಸ್ಮರಿಸುವುದು ಸೂಕ್ತವಾಗಿದೆ. 1917 ರ ಕ್ರಾಂತಿಯಲ್ಲಿ ಮತ್ತು ಅದರ ಮುಂದಿನ ಅಂತರ್ಯುದ್ಧದ ವರ್ಷಗಳಲ್ಲಿ ರಷ್ಯದ ಮಹಿಳೆಯರು ಭಾಗವಹಿಸದ ಕ್ಷೇತ್ರವೇ ಇರಲಿಲ್ಲ. ಅತ್ಯುಚ್ಚ ಸೋವಿಯೆತ್‌ನ ಸದಸ್ಯತ್ವದಿಂದ ಹಿಡಿದು ಬಂದೂಕ ಹಿಡಿದು ಶತ್ರುವಿನ ಧ್ವಂಸ ಮಾಡುವವರೆಗೆ ಎಲ್ಲ ರೀತಿಯ ಕೆಲಸಗಳಲ್ಲೂ ಪುರುಷರಿಗೆ ಸರಿಸಮರಾಗಿ, ಮತ್ತು ಕೆಲವೊಮ್ಮೆ ಅವರನ್ನು ಮೀರಿಸಿ, ಸ್ತ್ರೀಯರು ವಿಶ್ವದ ಅಗ್ರಮಾನ್ಯರಲ್ಲಿ ಚಿರಸ್ಥಾಯಿಯಾಗಿ ಉಳಿದಿದ್ದಾರೆ. ಎರಡನೆ ಮಹಾಯುದ್ಧದ ಕಾಲದಲ್ಲಿ ಲೆನಿನ್‌ಗ್ರಾಡ್ ನಗರವು ಒಂದು ಸಾವಿರ ದಿನಗಳ ಪರ್ಯಂತ ಶತ್ರುಸೈನ್ಯದಿಂದ ಸುತ್ತುವರಿಯಲ್ಪಟ್ಟಿದ್ದಾಗ ಹಿಟ್ಲರನ ಕನಸನ್ನು ನುಚ್ಚುನೂರು ಮಾಡಿದವರು ಆ ನಗರದ ಮಹಿಳೆಯರೆಂದರೆ ಅತಿಶಯೋಕ್ತಿಯಲ್ಲ. ಯುದ್ಧಸಾಮಗ್ರಿಗಳನ್ನು ತಯಾರಿಸುವ ಎಲ್ಲ ಕಾರ್ಖಾನೆಗಳಲ್ಲೂ ಉತ್ಪಾದನೆಯ ಬಹುಪಾಲು ಕೆಲಸವನ್ನು ನಿರ್ವಹಿಸಿದವರು ಮಹಿಳೆಯರು. ಆಹಾರದ ಅಭಾವದಿಂದಾಗಿ ಕೆಲಸಮಾಡಲು ದೇಹಶಕ್ತಿಯು ಅತಿಯಾಗಿ ಕುಗ್ಗಿಹೋಗಿದ್ದ ಆ ದಿನಗಳಲ್ಲೂ ತಮ್ಮ ಪಾಲಿನ ಆಹಾರವನ್ನು ಸೈನಿಕರೊಡನೆ ಹಂಚಿಕೊಂಡು ಲೆನಿನ್‌ಗ್ರಾಡ್‌ನ ರಕ್ಷಣೆಯಲ್ಲಿ ಅವಿಭಾಜ್ಯವಾದ ಅಂಗವಾಗಿ ಇತಿಹಾಸದ ಪುಟಪುಟಗಳಲ್ಲೂ ವಿಜೃಂಭಿಸುತ್ತಿರುವವರು ಆ ಮಹಾನಗರಿಯ ಸ್ತ್ರೀಜನ. ಆ ಕ್ಷೋಭೆಯ ಸಾವಿರ ದಿನಗಳಲ್ಲಿ ಅಸುನೀಗಿದ ಲಕ್ಷಗಟ್ಟಲೆ ಜನರಲ್ಲಿ ಸ್ತ್ರೀಯರೇ ಅಧಿಕವೆಂದರೂ ತಪ್ಪಲ್ಲ. ನಗರದಿಂದ ಬೇರೆಡೆಗೆ ಜನರನ್ನು ಸಾಗಿಸುತ್ತಿದ್ದಾಗಲೂ ನಗರವನ್ನು ತ್ಯಜಿಸದೆ ಅದರ ಸ್ತ್ರೀರಕ್ಷೆಯಾಗಿ ಉಳಿದ ಈ ಉದಾತ್ತ ಮಹಿಳೆಯರ ಸ್ಮರಣೆ ಮತ್ತು ಗೌರವಗಳಿಗಾಗಿಯೇ ಲೆನಿನ್‌ಗ್ರಾಡ್‌ನಲ್ಲಿ ಇಂದಿಗೂ "ನಗರದ ತಾಯಿ"ಯ ಪ್ರತಿಮೆ ಉಜ್ವಲವೈಭವದಿಂದ ಮೆರೆಯುತ್ತಿದೆ. ಆ ನಗರದಲ್ಲಿದ್ದಂತೆಯೇ ಸೋವಿಯತ್ ಒಕ್ಕೂಟದ ಪ್ರತಿಯೊಂದು ನಗರ, ಪಟ್ಟಣ ಮತ್ತು ಹಳ್ಳಿಗಳಲ್ಲಿ ಸಹ ಮಹಿಳೆಯರ ನಿರಂತರ ಭಾಗವಹಿಸುವಿಕೆ, ಹೋರಾಟ, ಪ್ರಾಣತ್ಯಾಗಗಳು ಅಚ್ಚೊತ್ತಿ ನಿಂತಿವೆ.

ಕ್ರಾಂತಿಯ 68 ನೇ ವರ್ಷದ ಸಂದರ್ಭದಲ್ಲಿ ಅವರನ್ನು ನೆನೆಯುವುದು ಯಾವುದೇ ಪುರೋಗಾಮಿ ವ್ಯಕ್ತಿಗೆ ಉಚಿತವಾದ ಕರ್ತವ್ಯ, ಸ್ಫೂರ್ತಿಯ ಸೆಲೆ, ಮತ್ತು ಸಮಾನತೆಯ ಕಲ್ಪನೆಯು ಬರುವ ದಿನಗಳಲ್ಲಿ ಮೂರ್ತೀಭವಿಸುವಂತೆ ಮಾಡಲು ಕಂದಿಹೋಗದ ದಾರಿದೀಪ.

ಜಿ. ಆರ್.

ಸ್ಪಂದನ

ಈ ಶೀರ್ಷಿಕೆಯಡಿ ಚಿಕ್ಕ ಚಿಕ್ಕ ಲೇಖನಗಳನ್ನು ಆಹ್ವಾನಿಸುತ್ತೇವೆ. ನಿಮ್ಮ ಸುತ್ತ-ಮುತ್ತಲ ಸಂಗತಿಗಳ ಬಗ್ಗೆ, ನಿರ್ದಿಷ್ಟ ವಿಷಯವನ್ನು ಕುರಿತಂತೆ ನಿಮ್ಮ ಅನಿಸಿಕೆಗಳನ್ನು ಈ ಶೀರ್ಷಿಕೆಗೆ ಬರೆಯಿರಿ. ಲೇಖನ ಚಿಕ್ಕದಾಗಿ, ಸ್ಪಷ್ಟವಾಗಿ ಇರಲಿ.

ಏಕರೂಪ ಸಿವಿಲ್‌ಸಂಹಿತೆಗೆ ಒತ್ತಾಯ

''ಇಂದು ಭಾರತೀಯ ಮಹಿಳೆ ಎನ್ನಿಸಿಕೊಳ್ಳುವಂತಹವರು ಇಲ್ಲವೇ ಇಲ್ಲ. ಹಿಂದು ಮಹಿಳೆ, ಮುಸ್ಲಿಂ ಮಹಿಳೆ, ಕ್ರಿಶ್ಚಿಯನ್ ಮಹಿಳೆ, ಆದಿವಾಸಿ ಮಹಿಳೆ-ಇವರುಗಳಷ್ಟೇ ಇದ್ದಾರೆ," ಎಂದು ದೆಹಲಿಯ ಖ್ಯಾತ ಮಹಿಳಾ ವಕೀಲರಾದ ಕುಮಾರಿ ಪುಷ್ಪಾರಾಣಿ ಓಂಸುರಾಣಿಯವರು ವಿಚಾರ ಗೋಷ್ಠಿಯೊಂದರಲ್ಲಿ ಮಾತನಾಡುತ್ತಿದ್ದಾಗ ಹೇಳಿದ ಮಾತು ನೂರಕ್ಕೆ ನೂರರಷ್ಟು ಸತ್ಯ.

ಭಾರತ ಸಂವಿಧಾನದ 3, 4 ಮತ್ತು 4 ಎ ಭಾಗಗಳನ್ನು ಗಮನಿಸಿದರೆ ಮಹಿಳೆಯರಿಗಾಗಿಯೇ ಪ್ರತ್ಯೇಕ ಮೂಲಭೂತ ಹಕ್ಕುಗಳನ್ನಾಗಲೀ, ಅಥವಾ ಇತರ ಹಕ್ಕುಗಳನ್ನೇ ಪ್ರತ್ಯೇಕವಾಗಿ ಆಗಲಿ ನಮೂದಿಸಿರುವಂತೆ ಕಾಣುವುದಿಲ್ಲ. ಕೇವಲ (6) ಸ್ಥಳದಲ್ಲಿ ಮಾತ್ರ "ಸ್ತ್ರೀಯರು" ಶಬ್ದದ ಉಲ್ಲೇಖವಿದೆ. ಇತರ ಕಡೆಗಳಲ್ಲಿ ವ್ಯಕ್ತಿಗಳು, ಪ್ರಜೆಗಳು- ಎಂಬ ಶಬ್ದದ ಉಲ್ಲೇಖವಿದೆ. ಈ ಶಬ್ದಗಳು ನಿರ್ವಿವಾದವಾಗಿ ಅರ್ಥವ್ಯಾಪ್ತಿಯಲ್ಲಿ ಸ್ತ್ರೀಯರನ್ನೂ ಒಳಗೊಂಡಿದೆ. ಆದರೆ ಸಂವಿಧಾನದ 15ನೇ ಅನುಚ್ಛೇದದ ಪ್ರಕಾರ "ಹೆಂಗಸು ಮತ್ತು ಮಕ್ಕಳಿಗಾಗಿ" ವಿಶೇಷ ಉಪಬಂಧ (ಅವಕಾಶ)ವನ್ನು ಕಲ್ಪಿಸಿಕೊಡಲು ಯಾವ ಅಡ್ಡಿಯೂ ಇಲ್ಲ.

ನಮ್ಮ ಸಂವಿಧಾನದ ಅನೇಕ ಕಲಮುಗಳನ್ನು ಗಮನಿಸಿದರೆ ಸಂವಿಧಾನ ಪೂರ್ವಕಾಲದಲ್ಲಿ ಸ್ತ್ರೀಯರಿಗೆ ಇಲ್ಲದಿದ್ದ ಅನೇಕ ಹಕ್ಕುಗಳನ್ನು ಇಂದು ಅವರಿಗೆ ದೊರಕಿಸಿರುವುದು ಸ್ಪಷ್ಟವಾಗಿದೆ. ಸ್ತ್ರೀಯರಿಗೆ ಕೆಲವು ಸಂದರ್ಭಗಳಲ್ಲಿ ವಿಶೇಷ ಅವಕಾಶಗಳನ್ನು ಕಲ್ಪಿಸಿಕೊಡಲು ಉಪಬಂಧಗಳನ್ನು ಮಾಡಿದೆ. ಕಾನೂನನ್ನು ರಚಿಸಿದೆ. ಉದಾಹರಣೆಗೆ, ವರದಕ್ಷಿಣೆ ನಿಷೇಧ ಕಾನೂನು, ಹೆಂಗಸರ ಮತ್ತು ಹುಡುಗಿಯರ ದುರ್ವ್ಯಾಪಾರ ನಿಷೇಧ, ವೈವಾಹಿಕ ಹಾಗೂ ಮದುಮಕ್ಕಳ ವಯಸ್ಸಿಗೆ ಸಂಬಂಧಿಸಿದ ಅಧಿನಿಯಮ, ಭಾರತೀಯ ದಂಡ ಸಂಹಿತೆಯ ಕೆಲವು ನಿಯಮಗಳು, ಇತ್ಯಾದಿ ಹೆಣ್ಣುಮಕ್ಕಳ ರಕ್ಷಣೆಗಾಗಿಯೇ ಇವೆ.

ಇಷ್ಟೆಲ್ಲ ಹಕ್ಕುಗಳು ಹಾಗೂ ಅವಕಾಶಗಳು ಭಾರತೀಯ ಮಹಿಳೆಗೆ ಸಂವಿಧಾನದತ್ತವಾಗಿದ್ದರೂ, ಸಾಮಾಜಿಕ ರೂಢಿಗಳು, ಸಂಪ್ರದಾಯಗಳು ವಿವಿಧ ಮತಗಳಲ್ಲಿ ಭಿನ್ನವಾಗಿರುವುದರಿಂದ ಮಹಿಳೆಯರು ರೂಢಿಯಲ್ಲಿ ಅಸಮಾನ ಹಕ್ಕುಗಳನ್ನು ಹೊಂದಿದ್ದಾರೆ. ಅಲ್ಲದೆ ತಮ್ಮ ವೈಯಕ್ತಿಕ ಕಾನೂನುಗಳಲ್ಲಿರುವ ಅಸಮಾನ ಹಕ್ಕುಗಳ ಜೊತೆಗೆ ಸ್ತ್ರೀಯರ ಅಸಹಾಯಕತೆಯ ದುರುಪಯೋಗವೂ ಸೇರಿದಂತೆ ಅವಳು ಇಬ್ಬಗೆಯ ಶೋಷಣೆಗೆ ಗುರಿಯಾಗಿದ್ದಾಳೆ. ಇದಕ್ಕೊಂದೇ ಪರಿಹಾರ, ಎಲ್ಲಾ ಜಾತಿಯ ಮಹಿಳೆಯರೂ ಒಕ್ಕೊರಲಿನಿಂದ ಏಕರೂಪ ಸಿವಿಲ್ ಸಂಹಿತೆಗಾಗಿ ಒತ್ತಾಯಿಸುವುದು.

—ಎಚ್. ಆರ್. ಸಿಂಧ್ಯ



ಗೃಹಿಣಿಯ ಪಾತ್ರ ವಿಶ್ಲೇಷಣೆ

● ಮಾರ್ಗರೆಟ್ ಬಿಸ್ವಾಸ್

'ಹೌಸ್ ವೈಫ್' :— ಲೇಖಕಿ : ಆ್ಯನ್ ಓಕ್ಲೆ ; ಪ್ರಕಾಶಕರು — ಪೆಲಿಕನ್ ಬುಕ್ಸ್ (1974), ಪುಟಗಳು 273 ; ಬೆಲೆ—80 ಪೆನ್ಸ್ (ಬ್ರಿಟನ್)

ಹೆಸರೇ ಸೂಚಿಸುವಂತೆ ಇದು ಮಹಿಳೆಯರನ್ನು ಮತ್ತು ಮನೆಯಲ್ಲಿ ಅವರ ವೇತನರಹಿತ ದುಡಿಮೆಯನ್ನು ಕುರಿತ ಪುಸ್ತಕ. ಗೃಹಿಣಿಯ ಪಾತ್ರ ಕುರಿತಂತೆ ಲೇಖಕಿಯು ಹಲವು ಅಂಶಗಳನ್ನು ವ್ಯಕ್ತಪಡಿಸುತ್ತಾರೆ. 1) ವಯಸ್ಕ ಸ್ತ್ರೀ ಪುರುಷರಿಬ್ಬರೂ ಹಂಚಿಕೊಳ್ಳುವ ಬದಲು ಗೃಹ ಕೃತ್ಯವನ್ನು ಸಂಪೂರ್ಣವಾಗಿ ಮಹಿಳೆಯರಿಗೇ ನೀಡಿರುವುದು. 2) ಆರ್ಥಿಕ ಅವಲಂಬನೆಯ ಜೊತೆಗೆ ಇದಕ್ಕಿರುವ ಸಂಬಂಧ. 3) ಇದರ 'ದುಡಿಮೆ' ಎನಿಸಿಕೊಳ್ಳದ ಸ್ಥಾನಮಾನ – ಅಂದರೆ ಆರ್ಥಿಕವಾಗಿ ಉತ್ಪಾದನಾ ದುಡಿಮೆಗೆ ವಿರುದ್ಧವಾದ ದುಡಿಮೆ; 4) ಆದ್ಯತೆಯ ಸ್ವರೂಪ–ಅಂದರೆ ಇನ್ನಿತರ ಪಾತ್ರಗಳಿಗಿಂತ ಮಹಿಳೆಯು ಇದಕ್ಕೆ ಹೆಚ್ಚಿನ ಆದ್ಯತೆ ನೀಡಬೇಕೆಂಬ ವಾದ.

ಓಕ್ಲೆ ಅವರು ಈ ಪರಿಸ್ಥಿತಿಯ ಬೆಳವಣಿಗೆಗೆ ಐತಿಹಾಸಿಕ ಮತ್ತು ತಾತ್ವಿಕ ಕಾರಣಗಳನ್ನು ಹುಡುಕಲೆತ್ನಿಸಿ ನಾಲ್ಕು ಗೃಹಿಣಿಯರ ಬಗ್ಗೆ ಕುರಿತ ಅಧ್ಯಯನಗಳ ಮೂಲಕ ಇಂದಿನ ಮಹಿಳೆಯ ಅಭಿಪ್ರಾಯ ನಿರೂಪಿಸುತ್ತಾರೆ. ಪುಸ್ತಕದಲ್ಲಿನ ಬಹಳಷ್ಟು ಅಂಶಗಳು ಬ್ರಿಟನ್ನಿನ ಪರಿಸ್ಥಿತಿಯನ್ನು ಸೂಚಿಸಿದರೂ ಈ ಪುಸ್ತಕವು ಎಲ್ಲ ಮಹಿಳೆಯರಿಗೂ ಅನ್ವಯಿಸುತ್ತದೆ. ಮುಖ್ಯವಾಗಿ ನಗರ ಪ್ರದೇಶದಲ್ಲಿ ವಾಸಿಸುವ, ಜಂಟಿ ಕುಟುಂಬದಿಂದ ಹೊರ ಬಂದು ಪ್ರತ್ಯೇಕವಾಗಿರುವವರಿಗೆ ಈ ಪುಸ್ತಕ ಆಸಕ್ತಿ ಕೆರಳಿಸುವುದು. ಅಂಥ ಮಹಿಳೆಯು ಪಾಶ್ಚಿಮಾತ್ಯ ಸಮಾಜದಲ್ಲಿನ ತನ್ನ ಸಹೋದರಿಯರ ಜೊತೆ ಹೋಲಿಸಿಕೊಂಡರೆ ಅವರ ನಡುವೆ ಇರುವ ವ್ಯತ್ಯಾಸ ಮತ್ತು ಸಮಾನ ಸ್ಥಿತಿಗತಿಗಳನ್ನು ತಾನೇ ಅರಿತಾಳು.

ಮೊದಲ ಅಧ್ಯಾಯಗಳಲ್ಲಿ ಓಕ್ಲೆ ವಾದಿಸುವುದೇನೆಂದರೆ, ಕೈಗಾರಿಕೀಕರಣವು ಮನೆ, ಕುಟುಂಬ ಮತ್ತು ವೈಯಕ್ತಿಕ ಬದುಕನ್ನಷ್ಟೇ ಅಲ್ಲ, ದುಡಿಮೆಯ ಸ್ಥಳದಲ್ಲಿ ಕೂಡ ವಿಭಜನೆಯನ್ನು ನಿರ್ಮಿಸಿದೆ. ಕೈಗಾರಿಕೆ ಮುನ್ನದ ಸಮಾಜದಲ್ಲಿ ಈ ವಿಭಜನೆ ಇರಲಿಲ್ಲ. ಈ ಕೂಲಿ ಕೆಲಸ ಮತ್ತು ಮನೆಕೆಲಸದ ನಡುವಿನ ವಿಭಜನೆಯಿಂದಾಗಿ ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಲಿಂಗಭೇದ ಹೆಚ್ಚು ಉಗ್ರವಾಯಿತು. ಕೂಲಿ ಕೆಲಸದಿಂದ ಮಹಿಳೆಯನ್ನು ಹೊರತು ಪಡಿಸಿದ್ದರಿಂದ ಅವಳ ಶೋಷಣೆ ಹೆಚ್ಚಾಯಿತು. ಕೂಲಿಕೆಲಸದಿಂದಾಗಿ ಪುರುಷರು ದಬ್ಬಾಳಿಕೆಗೆ ಒಳಗಾಗಿದ್ದಾರೆ ಎನ್ನುವುದಾದರೆ, ಅಂತಹ ಅವಕಾಶದ ನಿರಾಕರಣೆಯಿಂದಾಗಿಯೇ ಮಹಿಳೆಯರು ದಬ್ಬಾಳಿಕೆಗೆ ಗುರಿಯಾಗಿದ್ದಾರೆ, ಎನ್ನುವುದು ಓಕ್ಲೆಯವರ ವಾದ. ವೇತನ ಸಹಿತ ಕಾರ್ಮಿಕ ಶಕ್ತಿಯಿಂದ ಮಹಿಳೆಯನ್ನು ಹೊರತು

ಪಡಿಸಿರುವುದು ಮುಖ್ಯವಾಗಿ ಬಂಡವಾಳಶಾಹಿ ವ್ಯವಸ್ಥೆ. ಏಕೆಂದರೆ ಬಂಡವಾಳಶಾಹಿ ಅಥವಾ ಕೈಗಾರಿಕೀಕರಣವು ವೇತನ ಸಹಿತ ದುಡಿಮೆಯನ್ನು ಮನೆಯ ಹೊರಗೆ ಸೃಷ್ಟಿಸಿದೆಯಲ್ಲದೆ ಬಂಡವಾಳಶಾಹಿ ವ್ಯವಸ್ಥೆಗೆ ಇನ್ನೂ ಹೆಚ್ಚು ವೇತನದ ಕಾರ್ಮಿಕರನ್ನು ಉತ್ಪಾದಿಸಲು ಮಹಿಳೆ ಮನೆಯಲ್ಲೇ ಉಳಿಯುವಂತೆ ಮಾಡಿದೆ.

ಓಕ್ಲೆಯವರ ವಿಶ್ಲೇಷಣೆಯು ಅಂತಿಮವಾಗಿ ಪ್ರತ್ಯೇಕತೆಯ ಕಲ್ಪನೆ, ವಿಭಜನೆಯ ಸಿದ್ಧಾಂತದ ಮೇಲೆ ನಿಲ್ಲುತ್ತದೆ. ಈ ವಿಭಜನೆಗೆ ಕಾರಣ ಬಂಡವಾಳಶಾಹಿ ವ್ಯವಸ್ಥೆ ಎನ್ನಲಾಗಿದೆ. ಸ್ತ್ರೀ–ಪುರುಷರ ಕ್ಷೇತ್ರಗಳು ಒಂದಕ್ಕೊಂದು ಪೂರಕ, ಪ್ರತ್ಯೇಕ–ಆದರೆ ಎರಡೂ ಮುಖ್ಯ ಎಂಬ ಈಗಿನ ವಾದವನ್ನು ಓಕ್ಲೆ ಒಪ್ಪುವುದಿಲ್ಲ. ಸ್ತ್ರೀ–ಪುರುಷರ ನಡುವಣ ಅಸಮಾನತೆಯನ್ನು ತಿರಸ್ಕರಿಸುತ್ತಾರೆ. ಮಹಿಳೆ, ಕೌಟುಂಬಿಕ ಖಾಸಗಿ ಜೀವನ ಮತ್ತು ಬಂಡವಾಳಶಾಹಿಯ ನಡುವಣ ಸಂಬಂಧದ ಮೇಲೆ ಅವರು ತಮ್ಮ ವಿಚಾರಗಳನ್ನು ಕೇಂದ್ರೀಕರಿಸಿದ್ದಾರೆ. ಈ ರೀತಿಯ ಖಾಸಗಿ ಜೀವನವನ್ನು ಬಂಡವಾಳಶಾಹಿ ವ್ಯವಸ್ಥೆ ಪುಷ್ಟೀಕರಿಸುತ್ತಿದ್ದರೆ, ಅಲ್ಲಿ ಮಹಿಳೆಯೇ ಏಕೆ ಮತ್ತು ಕಾರ್ಮಿಕ ಕ್ಷೇತ್ರದಲ್ಲಿ ಪುರುಷನೇ ಏಕೆ ದುಡಿಯುವಂತಾಗಬೇಕು? –ಓಕ್ಲೆ ವಾದಿಸುತ್ತಾರೆ. ಇದನ್ನು ಪಿತೃ ಪ್ರಧಾನ ಸಮಾಜದ ಉಲ್ಲೇಖವಿಲ್ಲದೆ ವಿವರಿಸಲಾಗದು. ಇಂದು ನಾವು ನೋಡುತ್ತಿರುವುದು ಸ್ತ್ರೀ–ಪುರುಷರ ನಡುವಣ ದುಡಿಮೆಯ ವಿಭಜನೆಯನ್ನಷ್ಟೇ ಅಲ್ಲ. ಈ ವಿಭಜನೆಯು ಪುರುಷರನ್ನು ಮೇಲ್ಮಟ್ಟಕ್ಕೂ ಸ್ತ್ರೀಯರನ್ನು ಕೆಳಮಟ್ಟಕ್ಕೂ ತಳ್ಳಿದೆ ಎಂಬುದು ಮುಖ್ಯ.

ಕೈಗಾರಿಕಾ–ಪೂರ್ವದ ಕುಟುಂಬ ಮತ್ತು ಜನಸಮುದಾಯವನ್ನು ಓಕ್ಲೆ ಉಲ್ಲೇಖಿಸುತ್ತಾರೆ. ಆಗ ಸ್ತ್ರೀಪುರುಷರು, ವಯಸ್ಕರು, ಮಕ್ಕಳು ಕುಟುಂಬ ಕೇಂದ್ರೀಕೃತ ಉದ್ದಿಮೆಗಳಲ್ಲಿ ಒಟ್ಟಾಗಿ ದುಡಿಯುತ್ತಿದ್ದರು. ಎಲ್ಲರೂ ಸಮುದಾಯ ಜೀವನದಲ್ಲಿ ಭಾಗಿಯಾಗುತ್ತಿದ್ದರು. ಭಾರತದಲ್ಲಿ ಇದ್ದಂತೆ (ಸ್ವಲ್ಪ ಮಟ್ಟಿಗೆ ಈಗಲೂ) ಬ್ರಿಟನ್ನಿನಲ್ಲಿ ಕೂಡ ಕೈಗಾರಿಕಾ-ಪೂರ್ವ ಸಮಾಜದಲ್ಲಿ ಕೃಷಿ ಮತ್ತು ನೇಯ್ಗೆ ಜನರ ಪ್ರಮುಖ ಉದ್ಯಮವಾಗಿತ್ತು. ಈ ಎರಡೂ ಕ್ಷೇತ್ರಗಳಲ್ಲಿ ಮಹಿಳೆಯ ಪಾತ್ರ ಅನಿವಾರ್ಯವಾಗಿತ್ತು. ಆದರೆ ಆ ಸಮಾಜದಲ್ಲಿ ಮಹಿಳೆಯು ಸಾಮಾನ್ಯ ಸದಸ್ಯಳಾಗಿದ್ದಳೇ? ಖಂಡಿತಾ ಇಲ್ಲ. ಇಲ್ಲಿ ಓಕ್ಲೆ ಅವರ ವಾದವು ಸ್ಪಷ್ಟೀಕರಣ ನೀಡುವಲ್ಲಿ ವಿಫಲವಾಗಿದೆ.

5,6 ನೇ ಅಧ್ಯಾಯಗಳಲ್ಲಿ ಗೃಹಿಣಿ ಎಂದರೇನೆಂಬ ಬಗ್ಗೆ ಓಕ್ಲೆ ವಿವರಣೆ ನೀಡಲೆತ್ನಿಸುತ್ತಾರೆ. ಇದರಲ್ಲಿ ಅವರು ಸಫಲರಾಗಿದ್ದಾರೆ, ಕೂಡ. ಗೃಹಿಣಿಯರನ್ನು ಕುರಿತ ಅಧ್ಯಯನದ ಸಾರಾಂಶವೇ ಈ ಅಧ್ಯಾಯಗಳು. ಅನೇಕ ಹೇಳಿಕೆಗಳು ಓದುಗರ ಸಹಾನುಭೂತಿ ಗಳಿಸುತ್ತವೆ. ಉದಾಹರಣೆಗೆ ತೆಗೆದುಕೊಳ್ಳಿ : "ನನ್ನ ಪ್ರಕಾರ, ನಾನು ಮನೆಯಲ್ಲೇ ಇರುತ್ತೇನಾದ್ದರಿಂದ ಗೃಹಕೃತ್ಯವನ್ನು ನಾನಲ್ಲದೆ ಇನ್ನಾರು ಮಾಡಬೇಕು ? ಇದರಲ್ಲಿ ಆಯ್ಕೆಯ ಪ್ರಶ್ನೆಯೇ ಇಲ್ಲ. ಮಾಡದೇ ಇರಬಹುದಾದ ಸಾಧ್ಯತೆ ಇದ್ದರೂ ನಾನು ಈ ಕೆಲಸವನ್ನು ಮಾಡದೇ ಇರಲಾರೆ." (ಮಾಜಿ ಕಂಪ್ಯೂಟರ್ ಪ್ರೋಗ್ರಾಮರ್–ಜಾಹಿರಾತು ಸಂಸ್ಥೆ ಮ್ಯಾನೇಜರ್ ಪತ್ನಿ.)

ಮತ್ತೊಂದು ಧ್ವನಿ ನೋಡಿ: "ಅವನ ಕೆಲಸ ಮುಗಿಯಿತೆಂದರೆ ಅದು ಮುಗಿದಂತೆಯೇ........ಭಾನುವಾರಗಳಂದು ಆತ ಬೆಳಗ್ಗೆ 12 ಗಂಟೆವರೆಗೆ ಮಲಗಿರಬಹುದು. ಎದ್ದು ಹೊರಹೋಗಲು ಸಿದ್ಧತೆ ನಡೆಸಿ ಹೊರಟೇ ಬಿಡುತ್ತಾನೆ. ಆದರೆ ನನ್ನ ಕೆಲಸ ಬದಲಾವಣೆಯನ್ನು ಹೊಂದುವುದೇ ಇಲ್ಲ." (ಮಾಜಿ ಕಾರ್ಖಾನೆ ನೌಕರಳು, ಚಾಲಕನ ಪತ್ನಿ)

ಕೊನೆ ಅಧ್ಯಾಯಗಳಲ್ಲಿ ಓಕ್ಲೆ ಅವರು ಈಗ ಕಾಪಾಡಿಕೊಂಡು ಬಂದಿರುವ ಮಹಿಳೆಯ ಪರಾಧೀನತೆ ಮತ್ತು ದಬ್ಬಾಳಿಕೆಯನ್ನು ತಾತ್ವಿಕ ಚೌಕಟ್ಟಿನಲ್ಲಿ ವಿವರಿಸಲು ಯತ್ನಿಸುತ್ತಾರೆ. ಈ ತತ್ವ ಲಿಂಗ ನೀತಿಯ ಮೇಲೆ ಆಧಾರಿತವಾಗಿದೆ. ಕೈಗಾರಿಕೀಕರಣದಿಂದ ಮನೆ ಮತ್ತು ಉದ್ಯೋಗ ಪ್ರತ್ಯೇಕಗೊಂಡಿದ್ದ ಅಂಶವನ್ನು ಗೌಣವಾಗಿ ಪರಿಗಣಿಸಿದ್ದವರು ಈಗ ಅದಕ್ಕೆ ಹೆಚ್ಚು ಒತ್ತು ಕೊಟ್ಟು ನಿರೂಪಿಸಿದ್ದಾರೆ.

ಪುಸ್ತಕದಲ್ಲಿನ ಮೂರು ವಿಷಯಗಳನ್ನು ಓಕ್ಲೆಯವರು ಸರಿಯಾಗಿ ಸಂಯೋಜಿಸದಿರುವುದರಿಂದ ಪುಸ್ತಕವು ಬಿಡಿಬಿಡಿಯಾಗಿ ನಿರಂತರತೆಯನ್ನು ಕಳೆದುಕೊಂಡಿದೆ. ○